ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಫಿಫಾ ವಿಶ್ವಕಪ್ ವಿಜೇತರಿಗೆ ಸಿಗಲಿದೆ ವಜ್ರ ಖಚಿತ ಚಿನ್ನದ ಚಾಂಪಿಯನ್‌ಶಿಪ್ ಉಂಗುರ... ಅರ್ಜೆಂಟೀನಾ ಮತ್ತು ಸ್ಪೇನಾ ನಡುವಿನ ಫೈನಲ್ ಪಂದ್ಯ.

18 ಜುಲೈ, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 127 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕೊಳಕು, ಅಸಹ್ಯಗಳನ್ನು ಮೀರಿ ನಿಲ್ಲುವ ಮಾನವೀಯತೆ » 2



ಜೋಳಕ್ಕೆ ಬಿಳಿ ಸುಳಿ ರೋಗ : ನೆರವಿಗೆ ಧಾವಿಸಿ » 3



ದೇಣಿಗೆ ದುರುಪಯೋಗ : ಸುಪ್ರೀಂ ಶೀಘ್ರ ಮಧ್ಯಂತರ ವರದಿ » 4

# ಸಂಪುಟದಲ್ಲಿ ಹೊಸಬರಿಗೆ ಅವಕಾಶ

## ■ ಮುಂದಿನ ಚುನಾವಣೆ ಗಮನದಲ್ಲಿಟ್ಟು ಕೊಂಡು ಹೈಕಮಾಂಡ್ ಚಿಂತನೆ

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಶೇ.60 ರಷ್ಟು ಹೊಸ ಮುಖಗಳಿಗೆ ಅವಕಾಶ ನೀಡಲು ಚಿಂತನೆ ನಡೆಸಿದೆ.

ಸಂಪುಟದಲ್ಲಿ ಸ್ಥಾನ ಪಡೆಯುವವರ ಆಯ್ಕೆಗೆ ಹಲವು ಮಾನದಂಡಗಳನ್ನು ಅನುಸರಿಸಲು ನಿರ್ಧರಿಸಲಾಗಿದೆ. ಜಾತಿ, ಸಮಾಜದ ಸ್ಥಿತಿಗತಿಗಳು, ಅಭ್ಯರ್ಥಿಗಳ ಹಿನ್ನಲೆ, ಶಿಕ್ಷಣ ಮತ್ತು ಅನುಭವ ಸೇರಿವೆ. ಹೊಸಬರು ಹಾಗು ಯುವಕರಿಗೆ ಅವಕಾಶ ನೀಡುವುದರಿಂದ ಪಕ್ಷಕ್ಕೆ ಹೊಸ ನಾಯಕತ್ವ ಸಿಗುತ್ತದೆ ಮತ್ತು ಅವರು ಪಕ್ಷದ ಆಸ್ತಿಯಾಗುತ್ತಾರೆಂಬುದು ವರಿಷ್ಠರ ಅಭಿ ಪ್ರಾಯ. ಖಾಲಿ ಇರುವ 20 ಸಚಿವ ಸ್ಥಾನಗಳಲ್ಲಿ ಶೇ.60 ಶೇಕಡಾ ಸ್ಥಾನಗಳನ್ನು ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗು ಅಲ್ಪಸಂಖ್ಯಾತ ಸಮುದಾಯಗಳಿಗೆ ನೀಡುವ ಸಾಧ್ಯತೆ ಇದೆ. ಅಲ್ಲದೆ, ಕನಿಷ್ಠ ಇಬ್ಬರು ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡುವ ಸಾಧ್ಯತೆ ಇದೆ.

**ಪ್ರತ್ಯೇಕ ಪಟ್ಟಿ ಸಲ್ಲಿಕೆ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೈ ಕಮಾಂಡ್‌ಗೆ ಸಲ್ಲಿಸಿರುವ ಪಟ್ಟಿಯಲ್ಲಿ ಭೌಗೋಳಿಕತೆಗೆ ಆದ್ಯತೆ ನೀಡಿದ್ದಾರೆ. ತಾವು ಸಲ್ಲಿಸಿರುವ ಶಾಸಕರ ಕರಡು ಪಟ್ಟಿಯಲ್ಲಿರುವವರು ಯಾವ ಸಮುದಾಯಕ್ಕೆ ಸೇರಿದ್ದಾರೆ, ಜನಾಂಗೀಯ ಮತ ಗಳಿಕೆಯಲ್ಲಿ ಅವರ ಪ್ರಭಾವ, ಎಷ್ಟು ಬಾರಿ ಶಾಸಕರಾಗಿದ್ದಾರೆ, ಇಲ್ಲಿಯವರೆಗೂ ಅವರು ಅನುಭವಿಸಿದ ಸಾಂವಿಧಾನಿಕ ಸ್ಥಾನ ಮಾನ, ಪಕ್ಷದ ಸದಸ್ಯತ್ವ ನೋಂದಣಿ, ಸಂಘಟನೆ ಮತ್ತು ಹೋರಾಟಗಳಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆಯ ಸಮಗ್ರ ವಿವರಗಳನ್ನು ನೀಡಿದ್ದಾರೆ.

ಜೊತೆಗೆ ಪಕ್ಷ ಬದ್ಧತೆ, ನಾಯಕತ್ವ ನಿಷ್ಠೆ ವಿಚಾರವಾಗಿ ಶಾಸಕರ ನಡವಳಿಕೆ ಕುರಿತು ತಮ್ಮ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ. ಸಿದ್ದರಾಮಯ್ಯ ಸಲ್ಲಿಸಿರುವ ಪಟ್ಟಿಯಲ್ಲಿ ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ಶಾಸಕರುಗಳ ಚಾರಿತ್ರ್ಯದ ಬಗ್ಗೆಯೂ ಮಾಹಿತಿ ನೀಡಿದ್ದಾರೆ ಎನ್ನಲಾಗುತ್ತಿದೆ.



> ಸಚಿವ ಸಂಪುಟದ ವಿಸ್ತರಣೆಯ ಬಗ್ಗೆ ದೆಹಲಿಯಲ್ಲಿ ಪಕ್ಷದ ವರಿಷ್ಠ ರೊಂದಿಗೆ ಚರ್ಚೆ ನಡೆಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿ ಸಾಧ್ಯವಾಗದ ಕಾರಣ, ಶನಿವಾರ ಭೇಟಿ ಮಾಡಲಾಗುವುದು. ವರಿಷ್ಠರಿಂದ ಮಾರ್ಗದರ್ಶನ ಪಡೆದು ಸಚಿವ ಸಂಪುಟ ವಿಸ್ತರಣೆಗೆ ಸಿದ್ಧತೆ ಮಾಡಲಾಗುವುದು.
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಆ.6ರಿಂದ ವಿಧಾನಮಂಡಲ ಮುಂಗಾರು ಅಧಿವೇಶನ ನಡೆಯಲಿದೆ. ಈ ನಿಟ್ಟಿನಲ್ಲಿ ಸ್ಪೀಕರ್ ಹುದ್ದೆಯ ಬಗ್ಗೆಯೂ ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿದೆ. ಆದರೆ, ಯಾರಿಗೆ ಅವಕಾಶ ನೀಡಲಾಗುವುದೆಂಬುವುದು ಇನ್ನೂ ಅಂತಿಮಗೊಂಡಿಲ್ಲ. ದಿನೇಶ್ ಗುಂಡೂರಾವ್, ಆರ್.ವಿ.ದೇಶಪಾಂಡೆ ಹೆಸರು ಕೇಳಿ ಬರುತ್ತಿದೆ. ಅಂತಿಮವಾಗಿ ಹೈಕಮಾಂಡ್ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

## ಮಾಜಿ ಪ್ರಧಾನಿ ದೇವೇಗೌಡರ ಪತ್ನಿ ಚೆನ್ನಮ್ಮ ಆಸ್ಪತ್ರೆಗೆ ದಾಖಲು

• ಪ್ರಜೋದಯ ವರದಿ

**ಬೆಂಗಳೂರು:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಉಸಿರಾಟದ ತೊಂದರೆ ಕಾಣಿಸಿಕೊಂಡ ಹಿನ್ನಲೆಯಲ್ಲಿ ಗುರುವಾರ ರಾತ್ರಿ ಅವರನ್ನು ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಜ್ಞ ವೈದ್ಯರ ನಿಗಾದಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಅಗತ್ಯ ವೈದ್ಯಕೀಯ ಪರೀಕ್ಷೆಗಳನ್ನೂ ನಡೆಸಲಾಗುತ್ತಿದೆ. ಚೆನ್ನಮ್ಮ ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕ ಪಡುವ ಅಗತ್ಯವಿಲ್ಲವೆಂದು ವೈದ್ಯರು ಹೇಳಿದ್ದಾರೆ. ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದು, ವೈದ್ಯರು ನಿರಂತರವಾಗಿ ಆರೋಗ್ಯದ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಅವರನ್ನು ಆಸ್ಪತ್ರೆಯಲ್ಲೇ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ತಾಯಿ ಅನಾರೋಗ್ಯ ವಿಷಯ ತಿಳಿಯುತ್ತಿದ್ದಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಸ್ಪತ್ರೆಗೆ ಭೇಟಿ ನೀಡಿ, ತಾಯಿಯ ಆರೋಗ್ಯ ಸ್ಥಿತಿಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಸಹ ಆಸ್ಪತ್ರೆಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು.

## 2027 ರ ಮಾರ್ಚ್‌ಗೆ ಸ್ಥಳೀಯ ಸಂಸ್ಥೆ ಚುನಾವಣೆ

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯ ಸ್ಥಳೀಯ ಸಂಸ್ಥೆ ಚುನಾವಣೆಯನ್ನು 2027ರ ಮಾರ್ಚ್ ಒಳಗೆ ನಡೆಸುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟಪಡಿಸಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯಿಂದಾಗಿ ಜಿಬಿಎ ವ್ಯಾಪ್ತಿಯ ಐದು ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಡಿಸೆಂಬರ್ 31 ರವರೆಗೆ ಕಾಲಾವಕಾಶವನ್ನು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಶುಕ್ರವಾರ ಕಾಲಾವ ಕಾಶವನ್ನು ವಿಸ್ತರಿಸಿದೆ. ಜಿಬಿಎ ಚುನಾವಣೆ ಯಲ್ಲದೇ ಮಾರ್ಚ್ ಅಂತ್ಯದೊಳಗೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾ. ಪಂ., ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ನಡೆಸಲಾಗುವುದು. ಎಐಸಿಸಿ ಕಚೇರಿ ನಮಗೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಗೆ ದೇವಾಲಯವಿದ್ದಂತೆ. ನಾವು ಅದ ರೊಂದಿಗೆ ಬೆಳೆದಿದ್ದೇವೆ. ನಮ್ಮ ಪಕ್ಷದ ಕಾರ್ಯದರ್ಶಿಯನ್ನು ದೇವಾಲಯದಲ್ಲಿಯೇ ಭೇಟಿಯಾಗುವುದು ನಮ್ಮ ಕರ್ತವವಾಗಿದೆ ಎಂದರು.

## ಬಿಪಿಎಲ್: ಆದಾಯ ಮಿತಿ ಹೆಚ್ಚಳ ಬಗ್ಗೆ ಶೀಘ್ರ ನಿರ್ಧಾರ

• ಪ್ರಜೋದಯ ವರದಿ

**ಬೆಂಗಳೂರು:** ಬಿಪಿಎಲ್ ಕಾರ್ಡ್ ಪಡೆಯಲು ನಿಗದಿಪಡಿಸಲಾಗಿರುವ ಆದಾಯ ಮಿತಿ ಹೆಚ್ಚಿಸುವ ಕುರಿತು ಶೀಘ್ರದಲ್ಲೇ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದೆಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್.ವಿ.ದೇಶಪಾಂಡೆ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಆದಾಯ ಮಿತಿ ಹೆಚ್ಚಿಸುವಂತೆ ಶಿಫಾರಸು ಮಾಡಿದೆ. ಸಾರ್ವಜನಿಕ ವಲಯದಲ್ಲೂ ಈ ಬೇಡಿಕೆ ಇದ್ದು, ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ತ್ವರಿತವಾಗಿ ತೀರ್ಮಾನ ಕೈಗೊಳ್ಳಲಾಗುವುದೆಂದರು.

ತುರ್ತು ಆರೋಗ್ಯ ಸೇವೆಗಳ ಕಾರಣಕ್ಕಾಗಿ ಬಿಪಿಎಲ್ ಕಾರ್ಡ್ ಕೋರಿ ಅರ್ಜಿ ಸಲ್ಲಿಸುವವರಿಗೆ ವಿಳಂಬವಿಲ್ಲದೆ 15 ದಿನಗಳ ಒಳಗಾಗಿ ಕಾರ್ಡ್ ವಿತರಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕಗೊಳಿಸಲು ಸ್ಮಾರ್ಟ್ ಪಿಡಿಎಸ್ ಯೋಜನೆ ಜಾರಿಗೊಳಿಸಲಾಗುತ್ತಿದ್ದು, ಇ-ಪಾಸ್ ಮತ್ತು ಎಲೆಕ್ಟ್ರಾನಿಕ್ ತೂಕದ ಯಂತ್ರಗಳ ಅಳವಡಿಕೆಗೆ ಟೆಂಡರ್‌ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಕೇಂದ್ರ ಸರ್ಕಾರವು ರಾಜ್ಯದಲ್ಲಿ 7.76 ಲಕ್ಷ ಅನುಮಾನಾಸ್ಪದ ಹಾಗ ಅನರ್ಹ ಬಿಪಿಎಲ್ ಕಾರ್ಡ್ ಗುರುತಿಸಿದೆ. ಈ ಪೈಕಿ ಈಗಾಗಲೇ ಶೇ.50 ರಷ್ಟು ಪರಿಷ್ಕರಣೆ ಪೂರ್ಣಗೊಂಡಿದೆ. ನಿಯಮ ಮೀರಿ ಕಾರ್ಡ್ ಪಡೆದಿದ್ದ ಒಟ್ಟು 4,32,295 ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಆಹಾರ ನಿಗಮದ ನಾನಾ ಹುದ್ದೆಗಳಿಗೆ ನೂತನವಾಗಿ ನೇಮಕವಾಗಿರುವ 376 ಸಿಬ್ಬಂದಿಗೆ ನೇಮಕಾತಿ ಪತ್ರ ವಿತರಿಸಲಾಯಿತು. ಜತೆಗೆ ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಗ್ರಾಹಕರ ಹಿತ ರಕ್ಷಣೆಗಾಗಿ ತಪಾಸಣೆ ನಡೆಸಲು ಅನುಕೂಲವಾಗುವಂತೆ 17 ವಾಹನ ಗಳಿಗೆ ಕೆ.ಹೆಚ್.ಮುನಿಯಪ್ಪ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

## ರೌಡಿಶೀಟರ್ ಮಂಜೇಶ್ ಹತ್ಯೆಯ 16 ಮಂದಿ ಬಂಧನ : ಎಸ್.ಪಿ.

• ಪ್ರಜೋದಯ ವರದಿ



**ಹಾಸನ:** ರೌಡಿಶೀಟರ್ ಮಂಜೇಶ್ ಕುಮಾರ್ ಕೊಲೆ ಪ್ರಕರಣ ಸಂಬಂಧ ಒಟ್ಟು 16 ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದ್ದು, ಬಂಧಿತರು ಕೊಲೆ, ಸುಲಿಗೆ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.7ರ ತಡರಾತ್ರಿ ನಗರದ ನ್ಯಾಯಾಲಯದ ಸಮೀಪ ನಡೆದ ಮಂಜೇಶ್ ಕೊಲೆ ಪ್ರಕರಣದ ಎ1 ಆರೋಪಿ ಪರಮೇಶ್, ಪುನೀತ್, ಶಶಿಧರ್, ಜಯಂತ್, ರಾಕೇಶ್, ಯಲ್ಲಾಲಿಂಗ, ಸಾಯಿನಾಥ್, ಬಿ.ಆರ್.ಭರತ್, ಆದಿತ್ಯ, ಎಂ.ಜಿ.ವಿಕಾಸ್, ಆಕಾಶ್, ಗಂಗಾಧರ್, ಉಮೇಶ್, ಪ್ರದೀಪ, ಇರ್ಫಾನ್ ಮತ್ತು ಆಯೂಬ್‌ಖಾನ್ ಎಂಬುವವರನ್ನು ಬಂಧಿಸಲಾಗಿದೆ. ಎ1 ಆರೋಪಿ ಪರಮೇಶ್, ಮೈಸೂರಿನ ಸರಸ್ವತಿ ಪುರಂ ಪೊಲೀಸ್ ಠಾಣೆಗೆ ಹಾಜರಾಗಿ ಶರಣಾಗಿದ್ದ. ಅಲ್ಲಿಗೆ ನಮ್ಮ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದೇವೆಂದು ಹೇಳಿದರು.

ಬಂಧಿತ ಪರಮೇಶ್ ಮೇಲೆ 4 ಕೊಲೆ ಪ್ರಕರಣ ಸೇರಿ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ 14 ಪ್ರಕರಣಗಳಿವೆ. ಎ2 ಪುನೀತ್ ವಿರುದ್ಧ 13 ಕೇಸ್‌ಗಳಿವೆ. ಕೊಲೆಯಾದ ಮಂಜೇಶ್ ಮೇಲೂ 4 ಕೊಲೆ ಸೇರಿ 8 ಪ್ರಕರಣ ದಾಖಲಾಗಿದ್ದವು. ಕೊಲೆಯಾದ ಮಂಜೇಶ್ ಮತ್ತು ಎ1 ಆರೋಪಿ ಪರಮೇಶ್ ಇಬ್ಬರು ಸ್ನೇಹಿತರು. ಮತ್ತವರ ಸಹಚರರು, ಒಟ್ಟಾಗಿಯೇ ಅನೇಕ ಕೊಲೆ, ಸುಲಿಗೆ ಇತ್ಯಾದಿ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದರು. ಆದರೆ, 2012 ರಲ್ಲಿ ನಡೆದ ಕೊಲೆ ಪ್ರಕರಣದ ನಂತರ ಇಬ್ಬರ ನಡುವೆ ಹಗೆತನ ಬೆಳೆಯಿತು. ಇದೇ ಕಾರಣಕ್ಕೆ ಮಂಜೇಶನ್ನು ಕೊಲೆ ಮಾಡಲಾಗಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ಈ ಬಗ್ಗೆ ತನಿಖೆ ಮುಂದುವರಿದಿದ್ದು, ಬಂಧಿತ ಆರೋಪಿಗಳೆಲ್ಲರೂ ಇನ್ನೂ ಪೊಲೀಸ್ ಕಸ್ಟಡಿಯಲ್ಲೇ ಇದ್ದಾರೆಂದು ತಿಳಿಸಿದರು.

ರೌಡಿಶೀಟರ್ ಮಂಜೇಶ್‌ನನ್ನು ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ಗಡಿಪಾರು ಮಾಡಿದ ನಂತರ, ಹತ್ಯೆಗಾಗಿ ಪರಮೇಶ್ ಮತ್ತವರ ತಂಡ ಮಂಜೇಶನ ಚಲನ-ವಲನ ಗಮನಿಸಲು ಒಬ್ಬನನ್ನು ಚಿಕ್ಕಮಗಳೂರಿನಲ್ಲಿಯೇ ಬಿಟ್ಟಿದ್ದರು. ಜೂ.7 ರಂದು ಮಂಜೇಶ್ ಚಿಕ್ಕಮಗಳೂರಿನಿಂದ ಬಸ್‌ನಲ್ಲಿ ಬರುವುದನ್ನು ಹಿಂಬಾಲಿಸಿಕೊಂಡು ಬಂದು ನೀಡಿದ ಮಾಹಿತಿ ಆಧರಿಸಿ ನಗರದಲ್ಲಿ ಹತ್ಯೆ ಮಾಡಲಾಗಿತ್ತು ಎಂದು ಮಾಹಿತಿ ನೀಡಿದರು.

# ಹೆಚ್‌ಆರ್‌ಪಿ ಹಗರಣ : ಜಾಮೀನು ಮೊರೆಹೋದ ಅಧಿಕಾರಿಗಳು

## ಮೊಬೈಲ್‌ಗಳು ಸ್ವಿಚ್ಡ್ ಆಫ್: ಬಂಧನ ಭೀತಿಯಿಂದ ಕರ್ತವ್ಯಕ್ಕೆ ಗೈರು

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಹೆಚ್‌ಆರ್‌ಪಿ ಭೂಹಗರಣದ ತನಿಖೆ ಚುರುಕುಗೊಳ್ಳುತ್ತಿದ್ದಂತೆ, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಹಲವು ಅಧಿಕಾರಿಗಳು ಬಂಧನದ ಭೀತಿಯಿಂದ ಕರ್ತವ್ಯಕ್ಕೆ ಗೈರಾಗಿರುವುದಲ್ಲದೆ, ನಿರೀಕ್ಷಣಾ ಜಾಮೀನು ಪಡೆಯಲು ಮೊರೆ ಹೋಗಿದ್ದಾರೆ.

ಹಗರಣದ ತನಿಖೆ ಸಂಬಂಧ ಜುಲೈ 15 ರಂದು ಪ್ರಜೋದಯ ಪತ್ರಿಕೆಯಲ್ಲಿ **ಹೆಚ್‌ಆರ್‌ಪಿ ಹಗರಣ: ಅಧಿಕಾರಿಗಳ ಮೇಲೆ ತೂಗುಗತ್ತಿ** ಎಂಬ ವಿಶೇಷ ವರದಿ ಪ್ರಕಟವಾದ ಬೆನ್ನಲ್ಲೇ, ಜಿಲ್ಲೆಯ ಹಲವು ಅಧಿಕಾರಿಗಳು ಸೇರಿ ಹಲವು ನೌಕರರು ತಮ್ಮ ಮೊಬೈಲ್‌ಗಳನ್ನು ಸ್ವಿಚ್ಡ್ ಆಫ್ ಮಾಡಿಕೊಂಡು ಕಚೇರಿಗಳಿಗೆ ಹಾಜರಾಗದೆ, ಬೆಂಗಳೂರಿನ ವಕೀಲರ ಮೂಲಕ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ. 70ಕ್ಕೂ ಹೆಚ್ಚು ಮಂದಿ ಜಾಮೀನಿಗೆ ಅರ್ಜಿ ಸಲ್ಲಿಸಲು ಮುಂದಾಗಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ಜಿಲ್ಲೆಯ ಹೇಮಾವತಿ, ಯಗಚಿ, ವಾಟೆಹೊಳೆ ಜಲಾಶಯಗಳ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಭೂಮಿ ಮಂಜೂರು ಮಾಡುವ ಪ್ರಕ್ರಿಯೆಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳು ಹಾಗು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ವಿಶೇಷ ಭೂಸ್ವಾಧೀನಾಧಿಕಾರಿ 2023ರಲ್ಲಿ ತನಿಖೆ ನಡೆಸಿ ಒಟ್ಟು 210 ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದರು. ಈ ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿ, ವಿಶೇಷ ಭೂಸ್ವಾಧೀನಾಧಿಕಾರಿಯ ವರದಿಯಲ್ಲಿ ಕೆಲವು ನ್ಯೂನತೆಗಳು ಕಂಡು ಬಂದ ಹಿನ್ನಲೆಯಲ್ಲಿ ಅವುಗಳನ್ನು ಸರಿಪಡಿಸುವಂತೆ ವರದಿಯನ್ನು ಹಿಂದಿರುಗಿಸಿದ್ದರು.

ನಂತರ ಪ್ರತ್ಯೇಕ 10 ತನಿಖಾ ತಂಡಗಳು ಪರಿಶೀಲನೆ ನಡೆಸಿದಾಗ, 2015ರಿಂದ 2019 ರವರೆಗೆ ಒಟ್ಟು 977 ಪ್ರಕರಣಗಳಲ್ಲಿ ಅನಧಿಕೃತವಾಗಿ ಭೂಮಂಜೂರಾತಿ ನೀಡಿರುವುದು ಬೆಳಕಿಗೆ ಬಂದಿದ್ದು, ಸಂಬಂಧಿತ ಭೂ ಮಂಜೂರಾತಿಗಳನ್ನು ರದ್ದುಗೊಳಿಸಲಾಗಿತ್ತು. ಅಕ್ರಮದಲ್ಲಿ ಭಾಗಿಯಾಗಿದ್ದ 169 ಅಧಿಕಾರಿಗಳು ಹಾಗು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿ ಶಿಸ್ತು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗಿತ್ತು.



ಪ್ರಜೋದಯ

15 Jul 2026 - Page 1

ಹೆಚ್‌ಆರ್‌ಪಿ ಹಗರಣ: ಅಧಿಕಾರಿಗಳ ಮೇಲೆ ತೂಗುಗತ್ತಿ

-ಕೆ.ಪಿ.ಸಾಗರ್ ರಾಜು

• ಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

• ವಿವಿಧ ಭೂಕಬಳಿಕೆಯಲ್ಲಿ ಭಾಗಿಯಾದವರಿಗೂ ನಡುಕ

ಅಧಿಕಾರಿಗಳು, ನೌಕರರ ವಿರುದ್ಧ ವರದಿ

### ಮೂಲ ದಾಖಲೆಗಳು ಪೊಲೀಸ್ ವಶಕ್ಕೆ

ಹಗರಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿಯ ಮೂಲ ದಾಖಲೆಗಳನ್ನು ಸೆನ್, ಡಿಸಿಆರ್‌ಬಿ ಹಾಗು ಸಿಐಡಿ ತನಿಖಾ ತಂಡಗಳು ಸ್ಥಳ ಮಹಜರು ನಡೆಸಿ ವಶಪಡಿಸಿಕೊಂಡಿವೆ. ಉಳಿದ ಕೆಲವು ದಾಖಲೆಗಳನ್ನು ಮೈಸೂರು ಪ್ರಾದೇಶಿಕ ಆಯುಕ್ತರು ತಮ್ಮ ವಶಕ್ಕೆ ಪಡೆದಿದ್ದಾರೆ.



**ಮೂರು ತಿಂಗಳ ಹಿಂದೆ 141 ಮಂದಿಯ ಪಟ್ಟಿ**

ಅಕ್ರಮ ಭೂಮಂಜೂರಾತಿ ಪ್ರಕರಣ ಸಂಬಂಧ ಜಿಲ್ಲಾಧಿಕಾರಿ ಸೂಚನೆಯಂತೆ, ಲಭ್ಯ ಮಾಹಿತಿಯ ಆಧಾರದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಏಪ್ರಿಲ್ 4 ರಂದು 141 ಅಧಿಕಾರಿಗಳು ಹಾಗು ನೌಕರರ ವಿರುದ್ಧ ಅನುಬಂಧ-1ರಿಂದ ಅನುಬಂಧ-4ರವರೆಗೆ ದೋಷಾರೋಪಣಾ ಪಟ್ಟಿ ಸಿದ್ಧಪಡಿಸಿ ಜಿಲ್ಲಾಧಿಕಾರಿಗೆ ಸಲ್ಲಿಸಿದ್ದರು. ಈ ವರದಿಯನ್ನು ಅಂದಿನ ಜಿಲ್ಲಾಧಿಕಾರಿ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ರವಾನಿಸಿದ್ದರು.

ಈ ಹಗರಣದಲ್ಲಿ ಸಕಲೇಶಪುರ, ಬೇಲೂರು, ಹೊಳೆನರಸೀಪುರ, ಆಲೂರು, ಅರಕಲಗೂಡು ಹಾಗು ಹಾಸನ ತಾಲ್ಲೂಕುಗಳ ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿಗಳು, ತಹಶೀಲ್ದಾರರು, ಉಪ ತಹಶೀಲ್ದಾರರು, ರಾಜಸ್ವ ನಿರೀಕ್ಷಕರು, ಭೂ ಮಾಪಕರು, ಶಿರಸ್ತೇದಾರರು, ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರು ಭಾಗಿಯಾಗಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ತನಿಖಾಧಿಕಾರಿಗಳೊಂದಿಗೆ ಸಭೆ ನಡೆಸಿ, ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿರುವ ಬೆನ್ನಲ್ಲೆ ಬಂಧನದ ಭೀತಿಯಿಂದ ಅಧಿಕಾರಿಗಳು ವಕೀಲರನ್ನು ಸಂಪರ್ಕಿಸಿ ನಿರೀಕ್ಷಣಾ ಜಾಮೀನು ಪಡೆಯಲು ಮುಂದಾಗಿದ್ದಾರೆ. ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರೆ ಬಂಧನವಾಗುವ ಸಾಧ್ಯತೆ ಇದೆ.

**ಬಿಕೋ ಎನ್ನುತ್ತಿವೆ ಕಚೇರಿಗಳು**

ಸಕಲೇಶಪುರ, ಬೇಲೂರು, ಹೊಳೆನರಸೀಪುರ, ಆಲೂರು, ಅರಕಲಗೂಡು ಹಾಗು ಹಾಸನ ತಾಲ್ಲೂಕುಗಳ ಕಂದಾಯ ಮತ್ತು ಭೂಸ್ವಾಧೀನ ಕಚೇರಿಗಳಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಹಲವಾರು ಅಧಿಕಾರಿಗಳು ಹಾಗು ಸಿಬ್ಬಂದಿ ರಜೆ ಪಡೆದು ಗೈರಾಗಿರುವುದರಿಂದ ಕಚೇರಿಗಳು ಬಿಕೋ ಎನ್ನುತ್ತಿದ್ದು, ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಪರದಾಡುವ ಪರಿಸ್ಥಿತಿ ಇದೆ. ವಿಶೇಷವಾಗಿ ಸಕಲೇಶಪುರ, ಬೇಲೂರು ಹಾಗು ಆಲೂರು ತಾಲ್ಲೂಕುಗಳಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡು ಬಂದಿದೆ.

**(ಕ್ರಮಕ್ಕೆ ಸಲ್ಲಿಕೆಯಾಗಿರುವ ಪಟ್ಟಿ)**

| ತಾಲ್ಲೂಕು | ಅಧಿಕಾರಿಗಳ ಸಂಖ್ಯೆ |
|---|---|
| ಸಕಲೇಶಪುರ | -49 |
| ಬೇಲೂರು | -39 |
| ಆಲೂರು | -28 |
| ಅರಕಲಗೂಡು | - 12 |
| ಹಾಸನ | -7 |
| ಹೊಳೆನರಸೀಪುರ | -6 |
| ಒಟ್ಟು | -141 |

### ಭ್ರಷ್ಟರ ವಿರುದ್ಧ ಕ್ರಮಕ್ಕೆ ಒತ್ತಾಯ

ಹೆಚ್‌ಆರ್‌ಪಿ ಭೂ ಹಗರಣದಲ್ಲಿ ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಭೂ ಸಂತ್ರಸ್ತರು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಸಾಮಾಜಿಕ ಜಾಲತಾಣಗಳಲ್ಲಿಯೂ ಹಲವರು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

## ದಸರಾ ಉತ್ಸವದಲ್ಲಿ ಕಂಬಳ : ಎ.ಟಿ.ಆರ್. ಖಂಡನೆ

• ಪ್ರಜೋದಯ ವರದಿ



**ಅರಕಲಗೂಡು:** ಮೈಸೂರು ದಸರಾ ಉತ್ಸವದಲ್ಲಿ ಕಂಬಳ ಆಯೋಜಿಸುತ್ತಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಮಾಜಿ ಶಾಸಕ ಹಾಗು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಅವರು ಖಂಡಿಸಿದ್ದಾರೆ.


ರಾಜ್ಯ ಸರ್ಕಾರದ ನಡೆ ಖಂಡಿಸಿ ಜು.18ರ ಶನಿವಾರ ಮೈಸೂರಿನಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿ ಕೊಳ್ಳಲಾಗಿದೆ. ನಾಡಿನ ಸಂಸ್ಕೃತಿ ಮತ್ತು ಪರಿಸರವನ್ನು ರಕ್ಷಿಸಲು ಸಾರ್ವ ಜನಿಕರು ಹಾಗು ಯುವ ಜನರು ಹೆಚ್ಚಿನ ಸಂಖ್ಯೆ ಯಲ್ಲಿ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದ್ದಾರೆ.

ದಸರಾ ನಮ್ಮ ನಾಡ ಹಬ್ಬವಾಗಿದ್ದು, ಚಾಮುಂಡೇಶ್ವರಿಯ ಆರಾಧನೆ ಹಾಗು ಸಾಂಸ್ಕೃತಿಕ, ಧಾರ್ಮಿಕ ಪರಂಪರೆಯ ಕಾರ್ಯಕ್ರಮ ಗಳಿಗೆ ಮಾತ್ರ ಸೀಮಿತ ವಾಗಿರಬೇಕು. ಯಥೇಚ್ಛವಾಗಿ ಮಳೆಯಾಗುವ ಕರಾವಳಿ ಪ್ರದೇಶದಲ್ಲಿ ಜಲ ಕ್ರೀಡೆ ಕಂಬಳವನ್ನು ಆಯೋಜಿಸುವುದು ವಾಡಿಕೆ. ಮೈಸೂರಿನಲ್ಲಿ ಆಯೋಜಿಸುವುದು ರೀತಿಯಲ್ಲೂ ಸೂಕ್ತವಲ್ಲ. ಅಷ್ಟೇ ಅಲ್ಲದೆ, ಪಂಥ ಕಟ್ಟಿ ಕೋಣಗಳನ್ನು ಓಡಿಸುವ ಕಂಬಳವು ಒಂದು ರೀತಿಯ ಜೂಜಿನ ಸ್ವರೂಪವನ್ನು ಹೊಂದಿರುವುದರಿಂದ ಇಂತಹ ಆಚರಣೆಗಳು ನಮ್ಮ ಸಾಂಸ್ಕೃತಿಕ ಹಬ್ಬದ ಘನತೆಗೆ ಧಕ್ಕೆ ತರುತ್ತದೆ ಎಂದಿದ್ದಾರೆ.

ರಾಜ್ಯವು ಭೀಕರ ಬರಗಾಲವನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ನೀರಿನ ಅಪವ್ಯಯ ಮಾಡುವ ಜಲ ಕ್ರೀಡೆಗೆ ಮುಂದಾಗಿರುವುದು ಸರ್ಕಾರದ ದ್ವಂದ್ವ ನಿಲುವನ್ನು

» ನಾಲ್ಕನೇ ಪುಟದಲ್ಲಿ

## ಡಾ॥ ಬಿ.ಆರ್.ಯುವರಾಜ್ ಹಾಸನ ಡಿಎಚ್‌ಒ



• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಯಾಗಿ ಡಾ॥ ಬಿ.ಆರ್.ಯುವರಾಜ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಯಾಗಿದ್ದ ಡಾ॥ ಯುವರಾಜ್ ಶುಕ್ರವಾರ ಅಧಿಕಾರ ಸ್ವೀಕರಿಸಿದ್ದು, ವರ್ಗಾವಣೆಗೊಂಡಿರುವ ಡಿಎಚ್‌ಒ ಡಾ॥ ಅನಿಲ್ ಅವರಿಗೆ ಸ್ಥಳ ತೋರಿಸಿಲ್ಲ.ಶ್ರವಣಬೆಳಗೊಳ ಹೋಬಳಿ ಬರಾಳು ಗ್ರಾಮದ ಡಾ॥ ಯುವರಾಜ್ ಅವರು ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಯಾಗುವ ಮೊದಲು ಶ್ರವಣಬೆಳಗೊಳ ಹಾಗು ನುಗ್ಗೇಹಳ್ಳಿ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

## ಚಿನ್ನ ಅಡಮಾನವಿಟ್ಟುಕೊಂಡು ಗ್ರಾಹಕರಿಗೆ ವಂಚನೆ

### ನಗರದ ಗಜಲಕ್ಷ್ಮೀ ಗೋಲ್ಡ್ ಫೈನಾನ್ಸ್ ವ್ಯವಸ್ಥಾಪಕನ ಬಂಧನ : ಎಸ್‌ಪಿ ಮಾಹಿತಿ

• ಪ್ರಜೋದಯ ವರದಿ





**ಹಾಸನ:** ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ಗ್ರಾಹಕರನ್ನು ನಂಬಿಸಿ, 2 ಕೆ.ಜಿ. ಯಷ್ಟು ಚಿನ್ನಾಭರಣ ಅಡಮಾನ ವಿಟ್ಟುಕೊಂಡು ವಂಚಿಸಿದ್ದ ಪ್ರಕರಣವನ್ನು ನಗರ ಠಾಣೆ ಪೊಲೀಸರು ಭೇದಿಸಿ ಆರೋಪಿಯನ್ನು ಬಂಧಿಸಿದ್ದಾರೆ. ಗಜಲಕ್ಷ್ಮೀ ಗೋಲ್ಡ್ ಫೈನಾನ್ಸ್‌ನ ವ್ಯವಸ್ಥಾಪಕ ಮಂಜುನಾಥ್‌ನನ್ನು ವಶಕ್ಕೆ ಪಡೆಯಲಾಗಿದೆ.

ಶುಕ್ರವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರು, ನಗರದ ಸಾರಿಗೆ ಬಸ್ ನಿಲ್ದಾಣದ ಹಿಂಭಾಗದಲ್ಲಿ ಗಜಲಕ್ಷ್ಮೀ ಗೋಲ್ಡ್ ಫೈನಾನ್ಸ್ ಹೆಸರಿನಲ್ಲಿ 2025ರಲ್ಲಿ ಆರಂಭಗೊಂಡಿದ್ದ ಸಂಸ್ಥೆಯ ವ್ಯವಸ್ಥಾಪಕ ಮಂಜುನಾಥ್ ಎಂಬಾತ 100 ರೂ.ಗೆ 50 ಪೈಸೆ ಬಡ್ಡಿ ದರದಲ್ಲಿ ಸಾಲ ನೀಡುವುದಾಗಿ ಹೇಳಿ ಸಾರ್ವಜನಿಕರಿಂದ ಚಿನ್ನಾಭರಣಗಳನ್ನು ಅಡಮಾನವಿಟ್ಟುಕೊಂಡು ಸಾಲ ನೀಡುತ್ತಿದ್ದ. ಬಳಿಕ ಆ ಚಿನ್ನಾಭರಣಗಳನ್ನು ವಿವಿಧ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಮರುಅಡಮಾನವಿಟ್ಟು ಹೆಚ್ಚಿನ ಮೊತ್ತದ ಸಾಲ ಪಡೆದು ವಂಚನೆ ನಡೆಸಿದ್ದಾನೆಂದು ತಿಳಿಸಿದರು.

ಪ್ರಾಥಮಿಕ ತನಿಖೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳ 139 ಮಂದಿ ಗ್ರಾಹಕರಿಂದ ಸುಮಾರು 1,995 ಗ್ರಾಂ 35 ಮಿಲಿಗ್ರಾಂ ಚಿನ್ನಾಭರಣಗಳನ್ನು ಅಡಮಾನವಾಗಿ ಸ್ವೀಕರಿಸಿರುವುದು ಪತ್ತೆಯಾಗಿದೆ. ಈ ಚಿನ್ನವನ್ನು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಚನ್ನರಾಯಪಟ್ಟಣ, ಶ್ರೀರಂಗಪಟ್ಟಣ, ಹಾಸನ ಸೇರಿ ವಿವಿಧ ಬ್ಯಾಂಕ್‌ಗಳು ಮತ್ತು ಫೈನಾನ್ಸ್ ಸಂಸ್ಥೆಗಳಲ್ಲಿ ಅಡಮಾನ ಇಟ್ಟು ಸುಮಾರು 1.80 ಕೋ.ರೂ. ಹಣ ಪಡೆದಿದ್ದ. ಗ್ರಾಹಕರಿಗೆ ನೀಡಿದ ಮೊತ್ತಕ್ಕಿಂತ ಸುಮಾರು 42 ಲಕ್ಷ ಹೆಚ್ಚುವರಿ ಲಾಭ ಗಳಿಸಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಜನರು 5 ಗ್ರಾಂನಿಂದ 80 ಗ್ರಾಂವರೆಗೆ ಚಿನ್ನಾಭರಣಗಳನ್ನು ಅಡಮಾನವಿಟ್ಟಿದ್ದ ರೈತರು, ಕಾರ್ಮಿಕರು, ಆಟೋ ಚಾಲಕರು, ಸಣ್ಣ ವ್ಯಾಪಾರಿ ಗಳು ಸೇರಿ ಆರ್ಥಿಕವಾಗಿ ದುರ್ಬಲ ವರ್ಗ ದ ಜನರು ಈ ವಂಚನೆಯ ಬಲಿಯಾಗಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ವಿಶೇಷ ತನಿಖಾ ತಂಡವನ್ನು ರಚಿಸಿ ಕಾರ್ಯಾಚರಣೆ ಕೈಗೊಳ್ಳಲಾಯಿತು. ಆರೋಪಿಯು ಹಾಸನದಿಂದ ಪರಾರಿಯಾಗಿದ್ದರೂ, ಪೊಲೀಸರು ಅವನನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ವಿಚಾರಣೆ ವೇಳೆ ಆರೋಪಿಯು ವಂಚನೆ ಕೃತ್ಯವನ್ನು ಒಪ್ಪಿಕೊಂಡಿದ್ದು, ಗ್ರಾಹಕರ ಚಿನ್ನಾಭರಣಗಳನ್ನು ವಿವಿಧ ಬ್ಯಾಂಕ್‌ಗಳು ಮತ್ತು ಫೈನಾನ್ಸ್ ಸಂಸ್ಥೆಗಳಲ್ಲಿ ಅಡಮಾನ ಇಟ್ಟಿದ್ದು, ಬಂಧಿತ ಆರೋಪಿ ಮಂಜುನಾಥ್ ವಿರುದ್ಧ ಈ ಹಿಂದೆ ಮೈಸೂರು ಹಾಗು ಚಾಮರಾಜನಗರ ಜಿಲ್ಲೆಗಳಲ್ಲಿ ವಂಚನೆ ಪ್ರಕರಣಗಳು ದಾಖಲಾಗಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆತನ ಹಿಂದಿನ ಚಟುವಟಿಕೆಗಳ ಬಗ್ಗೆಯೂ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

**ಸಂತ್ರಸ್ತ ಗ್ರಾಹಕರು ಸಂಪರ್ಕಿಸಲು ಕರೆ**

ಮೋಸಕ್ಕೊಳಗಾದ 139 ಗ್ರಾಹಕರ ಪೈಕಿ ಇದುವರೆಗೆ 97 ಮಂದಿ ತಮ್ಮ ದಾಖಲೆಗಳನ್ನು ಪೊಲೀಸರಿಗೆ ಸಲ್ಲಿಸಿದ್ದಾರೆ. ಉಳಿದ 42 ಮಂದಿ ಗ್ರಾಹಕರು ಕೂಡಲೇ ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎ.ಟಿ.ಬಾನು ಅವರನ್ನು ಸಂಪರ್ಕಿಸಿ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಮನವಿ ಮಾಡಿದರು.

ಗ್ರಾಹಕರ ಚಿನ್ನಾಭರಣಗಳನ್ನು ವಾಪಾಸ್ ಪಡೆಯಲು ಸಂಬಂಧಿಸಿದ ಬ್ಯಾಂಕ್‌ಗಳು ಹಾಗು ಹಣಕಾಸು ಸಂಸ್ಥೆಗಳೊಂದಿಗೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಕಾನೂನುಬದ್ಧ ಕ್ರಮಗಳ ಮೂಲಕ ಚಿನ್ನಾಭರಣಗಳನ್ನು ಬಿಡುಗಡೆಗೊಳಿಸಿ ನಿಜವಾದ ಮಾಲೀಕರಿಗೆ ಹಿಂತಿರುಗಿಸಲು ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

## ನಗರದಲ್ಲಿ ಮುಂದುವರಿದ ಒತ್ತುವರಿ ತೆರವು ಕಾರ್ಯಾಚರಣೆ

• ಪ್ರಜೋದಯ ವರದಿ



**ಹಾಸನ:** ವಾಹನಗಳ ಸುಗಮ ಸಂಚಾರ, ಪಾದಚಾರಿ ಮಾರ್ಗದಲ್ಲಿ ಮುಕ್ತ ಓಡಾಟಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಮಹಾನಗರ ಪಾಲಿಕೆ ಕೈ ಗೊಂಡಿರುವ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರ ಮುಂದುವರಿಯಿತು.

ಎಂ.ಜಿ.ರಸ್ತೆ, ಬಿ.ಎಂ.ರಸ್ತೆ, ಕಸ್ತೂರ ಬಾ ರಸ್ತೆಯಲ್ಲಿ ಬೀದಿ ಬದಿ ಅಂಗಡಿಗಳನ್ನು ತೆರವುಗೊಳಿಸಿದ ಪಾಲಿಕೆ ಅಧಿಕಾರಿಗಳು ಹೋಟೆಲ್, ಅಂಗಡಿ ಮುಂಗಟ್ಟುಗಳ ಮುಂದೆ ಹಾಕಲಾಗಿದ್ದ ಫಲಕಗಳನ್ನು ತೆರವುಗೊಳಿಸಲಾಯಿತು. ಇನ್ನು ಕೆಲವರಿಗೆ ರಸ್ತೆ ಒತ್ತುವರಿ ಮಾಡಿ ವ್ಯಾಪಾರ ವಹಿವಾಟು ನಡೆಸದಂತೆ ನಿರ್ದೇಶನ ನೀಡಲಾಯಿತು.

ಕಳೆದ ಹಲವು ವರ್ಷಗಳಿಂದ ಪಾದಚಾರಿ ಮಾರ್ಗ ಅತಿಕ್ರಮಣದಿಂದ ಒಂದೆಡೆ ಪಾರ್ಕಿಂಗ್, ಮತ್ತೊಂದೆಡೆ ಪಾದಚಾರಿಗಳು ರಸ್ತೆ ಮೇಲೆಯೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ವಾಹನ ದಟ್ಟಣೆ ಹೆಚ್ಚಾಗಿ ಅಪಘಾತ ಪ್ರಮಾಣವೂ ಹೆಚ್ಚಿದ್ದವು. ಶಾಲಾ ಮಕ್ಕಳು, ಹಿರಿಯ ನಾಗರಿಕರು, ಮಹಿಳೆಯರು ಹಾಗು ವಿಶೇಷ ಚೇತನರು ಸುಗಮವಾಗಿ ನಡೆದಾಡಲು ಅಸಾಧ್ಯವಾಗಿತ್ತು.

ಅದನ್ನು ಮನಗಂಡ ಜಿಲ್ಲಾಡಳಿತ ಮತ್ತು ಪಾಲಿಕೆ ಅಧಿಕಾರಿಗಳು ಯೋಜಿತ ರೀತಿಯಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ ಕೈಗೊಂಡಿದ್ದು, ರಸ್ತೆ ಮತ್ತು ಪಾದಚಾರಿ ಮಾರ್ಗ ಮುಕ್ತಗೊಳಿಸುವ ಕೆಲಸ ಮುಂದುವರಿಸಿದ್ದಾರೆ.

ನಗರದ ಸೌಂದರ್ಯ ಹಾಳು ಮಾಡುವ ಹಾಗು ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸುವ ಜಾಹೀರಾತು ಫಲಕ, ಅನಧಿಕೃತ ನಾಮಫಲಕ ಮತ್ತು ದೊಡ್ಡ ಗಾತ್ರದ ಹೋರ್ಡಿಂಗ್‌ಗಳನ್ನು ತೆರವುಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ನಗರದ ಅಭಿವೃದ್ಧಿ ಎಂದರೆ ಕೇವಲ ರಸ್ತೆ ನಿರ್ಮಾಣವಲ್ಲ, ಸಾರ್ವಜನಿಕರಿಗೆ ಸುರಕ್ಷಿತ, ಸ್ವಚ್ಛ ಮತ್ತು ವ್ಯವಸ್ಥಿತ ವಾತಾವರಣ ಕಲ್ಪಿಸುವುದೂ ಆಗಿದೆ. ಅತಿಕ್ರಮಣ ತೆರವು ಕಾರ್ಯಾಚರಣೆ ನಿರಂತರವಾಗಿ ಮುಂದುವರಿಯಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಮಹಾನಗರ ಪಾಲಿಕೆಯ ದಿಟ್ಟ ಕ್ರಮದಿಂದ ವಾಹನಗಳ ಸಂಚಾರಕ್ಕೆ ಅನುಕೂಲ ಆಗಿದೆಯಾದರೂ ವ್ಯಾಪಾರ ನಂಬಿ ಜೀವನ ಸಾಗಿಸುತ್ತಿರುವ ಬೀದಿ ಬದಿ ವ್ಯಾಪಾರಿಗಳು ತೊಂದರೆ ಅನುಭವಿಸುವಂತಾಗಿದೆ. ಅವರಿಗೆ ಸೂಕ್ತ ಸ್ಥಳದಲ್ಲಿ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂಬ ಆಗ್ರಹ ಕೇಳಿಬಂದಿದೆ.

# ಕೊಳಕು, ಅಸಹ್ಯಗಳನ್ನು ಮೀರಿ ನಿಲ್ಲುವ ಮಾನವೀಯತೆ

ಎರಡು ಅಂಗಡಿಗಳ ನಡುವಿನ ಚಿಕ್ಕ ಬೀದಿ, ಅಲ್ಲೊಂದು ಅಡ್ಡ ಬಾಗಿಲು. ಬಾಗಿಲು ಸರಿಸಿ ಒಳಹೊಕ್ಕು ನೋಡುತ್ತಿದ್ದಂತೆ ಹತ್ತು ಬೈ ಹತ್ತರ ಕೋಣೆಯಲ್ಲಿ ಮೂರು ಜನ ಬೆವರಿಳಿಸಿ ಅಡುಗೆ ಮಾಡುತ್ತಿದ್ದರು. ಅವರ ಆಜುಬಾಜು ಒಂದೆರಡು ಲಕ್ಷ ನೊಣಗಳು ಹಾರಾಡುತ್ತಿದ್ದವು, ಅವರು ತಯಾರಿಸುವ ಪರೋಟಾ ಹಿಟ್ಟಿಗೆ ಮುತ್ತುತ್ತಿದ್ದವು.

ಕೆಲಸಕ್ಕೆ ಸೇರಿದ ಹೊಸತರಲ್ಲಿ ಕೊಲ್ಕೊತಾದಲ್ಲಿ ಕೆಲವು ತಿಂಗಳು ಇರಬೇಕಾಗಿ ಬಂತು. ಆಗ ನಾವು ಪ್ರತಿ ಸಂಜೆ ಒಂದೇ ಜಾಗದಿಂದ ಊಟ ತರಿಸುತ್ತಿದ್ದೆವು. ಒಂದು ಫೋನ್ ಮಾಡಿದರೆ ಮಲಬಾರ್ ಪರೋಟ, ಬಿಸಿಬಿಸಿಯಾಗಿ, ತುಪ್ಪ-ಡಾಲ್ಡಾದಲ್ಲಿ ಇಂಗಿ ಪಾರದರ್ಶಕವಾದ ಕಾಗದದಲ್ಲಿ ಸುತ್ತಿ ಬರುತ್ತಿತ್ತು. ಜೊತೆಯಲ್ಲಿ ದಿನಕ್ಕೊಂದು ರೀತಿಯ ಬಾಜಿ. ಹುಡುಗ ಚೋಟು ಮನೆ ಬಾಗಿಲಿಗೆ ಬಂದು ಊಟ ಕೊಟ್ಟು ಹೋಗುತ್ತಿದ್ದ. ಒಂದು ವಾರಾಂತ್ಯದ ದಿನ ಮಧ್ಯಾಹ್ನ ನನಗೆ ಅದೇ ಬೀದಿಯ ಹತ್ತಿರ ಕೆಲಸವಿತ್ತು.

ಹೇಗಿದ್ದರೂ ಇಲ್ಲಿಯೇ ಹತ್ತಿರವಿದ್ದದ್ದರಿಂದ ಚೋಟುವಿನ ಒಂದು ತಿರುಗಾಟ ಉಳಿಸಿದರಾಯ್ತು ಮತ್ತು ಇಷ್ಟು ದಿನ ನನ್ನ ಹೊಟ್ಟೆ ತುಂಬಿಸಿದ ಜಾಗವನ್ನು ಒಮ್ಮೆ ನೋಡಿದಂತಾಯ್ತು ಎಂದು ಅಡ್ರೆಸ್ ಹುಡುಕಿ ಹೋಗಿಬಿಟ್ಟೆ!


ಎರಡು ಅಂಗಡಿಗಳ ನಡುವಿನ ಚಿಕ್ಕ ಬೀದಿ, ಅಲ್ಲೊಂದು ಅಡ್ಡ ಬಾಗಿಲು. ಬಾಗಿಲು ಸರಿಸಿ ಒಳ ಹೊಕ್ಕು ನೋಡುತ್ತಿದ್ದಂತೆ ಹತ್ತು ಬೈ ಹತ್ತರ ಕೋಣೆಯಲ್ಲಿ ಮೂರು ಜನ ಬೆವರಿಳಿಸಿ ಅಡುಗೆ ಮಾಡುತ್ತಿದ್ದರು. ಅವರ ಆಜುಬಾಜು ಒಂದೆರಡು ಲಕ್ಷ ನೊಣಗಳು ಹಾರಾಡುತ್ತಿದ್ದವು, ಅವರು ತಯಾರಿಸುವ ಪರೋಟಾ ಹಿಟ್ಟಿಗೆ ಮುತ್ತುತ್ತಿದ್ದವು. ಆ ಕೋಣೆಯಲ್ಲಿ ಗಾಳಿಯಾಡುತ್ತಿದ್ದುದೇ ನೊಣಗಳ ರೆಕ್ಕೆಗಳಿಂದ.

ಇಷ್ಟು ಕಾಲ ಅಮ್ಮನ ಅಡುಗೆಯನ್ನು ನೆನಪಿಸುವ ಆಹಾರ ತಯಾರಾಗುವ ಜಾಗ, ಒಂದೈನೂರು ಸಾವಿರ ನೊಣಗಳು ಎಲ್ಲೆಂದರಲ್ಲಿ ಸತ್ತು ಮಮ್ಮಿಗಳಾಗಿ ಬಿದ್ದಿದ್ದವು. ಅವನ್ನು ಗುಡಿಸಿ ಆಚೆ ಹಾಕುವ ಕನಿಷ್ಠ ಅಂತ್ಯ ಸಂಸ್ಕಾರ ಭಾಗ್ಯವೂ ಅವಕ್ಕೆ ಇದ್ದಂತಿರಲಿಲ್ಲ. ತಮ್ಮ ಪೂರ್ವಜರ ಹೆಣಗಳನ್ನು ಲೆಕ್ಕಿಸದ ಹೊಸ ತಲೆಮಾರಿನ ನೊಣಗಳು ಪಕ್ಕದಲ್ಲೇ ಹೂಗ್ಲಿ ನದಿಯನ್ನು ಸೇರಲು ಹೊರಟ ಬೃಹತ್ ಚರಂಡಿಯಿಂದ ಎದ್ದೆದ್ದು ಬರುತ್ತಲೇ ಇದ್ದುವು. ಯಕ್.. ಕೊಳಕಾತಿ ಕೊಳಕು!!

ನಾನು ಆ ದಿನ ಅಲ್ಲಿ ನಿಂತದ್ದು ಹತ್ತೇ ಹತ್ತು ಸೆಕೆಂಡು ಇರಬಹುದು. ಯಾರಿಗೂ ಏನೂ ಹೇಳಲಿಲ್ಲ. ಹೊರಗೋಡಿ ಬಂದುಬಿಟ್ಟೆ. ಮತ್ತೆಂದೂ ಅಲ್ಲಿಂದ ಊಟ ತರಿಸಲಿಲ್ಲ ಎನ್ನುವುದು ಆಯ್ತಲ್ಲ. ಆ ಕೆಲವೇ ಕ್ಷಣದ ಅನುಭವದಿಂದ ನನ್ನ ಅತ್ಯಂತ ಪ್ರೀತಿಯ ಮಲಬಾರ್ ಪರೋಟಾವನ್ನು ನಾನು ಸುಮಾರು ಆರು ವರ್ಷ ತಿನ್ನಲೇ ಇಲ್ಲ !! ತಿನ್ನಲಿಕ್ಕೆ ಆಗುತ್ತಲೇ ಇರಲಿಲ್ಲ.

ಈಗ ಅದಾಗಿ ಹಲವು ವರ್ಷಗಳೇ ಕಳೆದಿವೆ. ಅದೆಷ್ಟೋ ದೇಶ, ಅದೆಷ್ಟೋ ಊಟ. ಆದರೆ ಇವತ್ತಿಗೂ ಥಳಥಳ ಹೊಳೆಯುವ ರೆಸ್ಟೋರೆಂಟಿನಲ್ಲಿ, ಗೆಳೆಯನ ಮನೆಯ ಸ್ವಚ್ಛ ಅಡುಗೆಮನೆಯಲ್ಲಿ, ಮೂವತ್ತು ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿರುವ ವಿಮಾನದಲ್ಲಿ ಎದುರಿಗೆ ಮಲಬಾರ್ ಪರೋಟ ಬಂದು ಕೂತ ಕ್ಷಣ, ಕೆಲವೊಮ್ಮೆ ಅದೇ ಸನ್ನಿವೇಶ ನೆನಪಾಗಿಬಿಡುತ್ತದೆ. ತಿನ್ನಲಿಕ್ಕಾಗುವುದಿಲ್ಲ. ಇಂತಹ ಮತ್ತು ಇದಕ್ಕಿಂತ ಅಸಹ್ಯಕರ – ಸನ್ನಿವೇಶಗಳು ನಮ್ಮೆಲ್ಲರ ಜೊತೆಯೂ ನಡೆದಿರುತ್ತದೆ. ಅವು ಸುಲಭಕ್ಕೆ ಮರೆಯಲಾಗುವುದಿಲ್ಲ. ಕೆಲವೊಮ್ಮೆ ನಮಗೇನು ಮಾನಸಿಕವೇ ಎಂದೆನ್ನಿಸುವಷ್ಟು ಅವು ನಮ್ಮೊಳಗೆ ಗಟ್ಟಿ ಕೂತು ಕಾಡುತ್ತವೆ. ಕೊಳಕು ಅಸಹ್ಯ ಎನ್ನುವುದು ಸಾಮಾನ್ಯದ ತಿರಸ್ಕಾರವಲ್ಲ ನೋಡಿ. ಅದು ನಮ್ಮನ್ನು ಹಿಂದಕ್ಕೆಳೆದುಬಿಡುತ್ತದೆ!

ಇದು ಭಯ ಅಥವಾ ಆಘಾತ ರೀತಿಯದಲ್ಲ. ಭಯದ



ಜೊತೆ ನಾವು ವಾದ ಮಾಡುತ್ತೇವೆ, ಭಯವನ್ನು ಮೀರುತ್ತೇವೆ. ಆದರೆ ಹೇವರಿಕೆಯ ಅನುಭವ ನಮ್ಮೊಳಗೆ ರಜಿಸ್ಟರ್ ಆಗುವ ರೀತಿಯೇ ಬೇರೆ!

ಕಳೆದ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಒಹಾಯೋ ರಾಜ್ಯದಲ್ಲಿ ಪ್ರಚಾರ ಮಾಡುತ್ತಿದ್ದ. ಅಲ್ಲಿ ಹೈಟಿ ದೇಶದಿಂದ ವಲಸೆ ಬಂದು ನೆಲೆಸಿದವರೇ ತುಂಬಿರುವ ಊರೊಂದಿದೆ. ಹೀಗಿರುವಾಗ ಅಲ್ಲೊಂದು ವರ್ಣ ಸಂಘರ್ಷ ಅಲ್ಲಿ ಸುಪ್ತವಾಗಿದೆ. ಟ್ರಂಪಣ್ಣನ ಚುನಾವಣೆ ಪ್ರಚಾರದ ಭಾಷಣ ಎಂದರೆ ಕೇಳಬೇಕೆ!

ಹೇಳಿ ಕೇಳಿ ಟ್ರಂಪ್. ಈ ಹೈಟಿ ದೇಶದಿಂದ ಬಂದವರಿದ್ದಾರಲ್ಲ, ಅವರು ನಿಮ್ಮ ಮನೆಯ ಸಾಕು ನಾಯಿಬೆಕ್ಕುಗಳನ್ನು ಹಿಡಿದು ತಿನ್ನುತ್ತಾರೆ ಎಂದು ಬಿಟ್ಟ. ಹಾಗೆ ಹೇಳಿದ್ದೇ ತಡ, ಇಡೀ ಊರಿಗೆ ಊರೇ ಇಬ್ಭಾಗವಾಗಿ ಹೋಯ್ತು! ಇಷ್ಟು ಕಾಲ ಹೊರಗಿನವರೆಂದು ದ್ವೇಷಿಸುತ್ತಿದ್ದ ಉಳಿದವರಿಗೆ ಹೈಟಿ ಮಂದಿ ಕೊಳಕು, ಅಸಹ್ಯ ಎಂದೆನಿಸಲು ಶುರುವಾಯಿತು. ಹೈಟಿ ಮಂದಿ ಇರುವ ಶಾಲೆ, ಕಾಲೇಜುಗಳಿಗೆ, ಕಚೇರಿಗಳಿಗೆ ಥ್ರೆಟ್ ಕಾಲ್ – ಬೆದರಿಕೆ ಕರೆ ಬಂದುವು ಇತ್ಯಾದಿ. ಉಳಿದವರು ತಮ್ಮ ಇಡೀ ಸಾಮಾಜಿಕ ವ್ಯವಸ್ಥೆಯೇ ಮಾಲಿನ್ಯಗೊಂಡು ಬಿಟ್ಟಿದೆ ಎಂಬ ರೀತಿಯಲ್ಲಿ ಪ್ರತಿಕ್ರಿಯಿಸಿದ್ದರು!!

ಟ್ರಂಪ್ ಹೈಟಿ ದೇಶದ ವಲಸಿಗರ ಬಗ್ಗೆ ಹೇಳುವಾಗ ಅವರು ಡೇಂಜರ್, ಕೆಟ್ಟವರು ಅನ್ನಲಿಲ್ಲ, ಬದಲಿಗೆ ಅವರು ಸಾಕು ನಾಯಿ, ಬೆಕ್ಕನ್ನು ಹಿಡಿದು ತಿನ್ನುತ್ತಾರೆ ಎಂದದ್ದು ದ್ವೇಷವನ್ನು ಮೀರಿ ಪರಿಣಾಮ ಬೀರಿತು. ಉಳಿದವರಿಗೆ ಹೈಟಿ ಜನರು ಮಹಾ ಕೊಳಕರೆನಿಸಿಬಿಟ್ಟಿತು. ಟ್ರಂಪ್ ಒಬ್ಬನೇ ಅಲ್ಲ, ಬಹಳಷ್ಟು ರಾಜಕಾರಣಿಗಳು ಕೊಳಕನ್ನು ನಾನಾ ರೀತಿ ಬಳಸಿಕೊಳ್ಳುವವರಿದ್ದಾರೆ.

ಯಾರನ್ನು ಯಾರೇ ಕೆಟ್ಟವರು ಎನ್ನುವುದಕ್ಕಿಂತ ಕೊಳಕರು ಎನ್ನುವುದು ಬೀರುವ ಪರಿಣಾಮ ಹೆಚ್ಚು. ಅವನು ಕೆಟ್ಟವನು ಎಂದರೆ ಅಲ್ಲಿ ಪರಾಮರ್ಶೆಯ ಸಾಧ್ಯತೆ ಇದೆ. ಆದರೆ ಒಬ್ಬ ಕೊಳಕ ಎಂದರೆ ಅಲ್ಲಿ ಮರುಪ್ರಶ್ನೆಯಿಲ್ಲ. ಕೊಳಕಿನಿಂದ ದೂರವಿರಬೇಕು. ಅಮಿತ್ ಶಾ ಗಡಿ ರಾಜ್ಯಗಳಲ್ಲಿ ನುಸುಳುಕೋರರನ್ನು ಗೆದ್ದಲು ಎಂದು ಆರೋಪಿಸುವುದಿದೆ.

ಬಾಳ್ ಠಾಕ್ರೆ ಕೂಡ ಟ್ರಂಪ್ ನಂತದ್ದೇ ಕೆಲಸ ಮಾಡಿದ್ದರು. ಏಕ್ ಬಿಹಾರಿ, ಸೌ ಬಿಮಾರಿ ಒಬ್ಬ ಬಿಹಾರಿ – ನೂರು ಬಿಮಾರಿ (ರೋಗ). ಠಾಕ್ರೆ ಒಂದು ಹೆಜ್ಜೆ ಮುಂದೆ ಹೋಗಿ ಪುಂಗಿ ಬಜಾವೋ, ಲುಂಗಿ ಭಗಾವೋ ಎಂದೆಲ್ಲ ಹೇಳಿಕೆ ಕೊಟ್ಟು ನಮ್ಮ ಉಡುಪಿ ಹೋಟೆಲ್ಲಿನವರು ಮಹಾ ಕೊಳಕರ ಪಟ್ಟಿಗೆ ಸೇರಿಸಿದ್ದರು. ಈಗ ಕಾಕ್ರೋಚ್ ಪಾರ್ಟಿ ಇಷ್ಟೆಲ್ಲಾ ಸದ್ದು ಗದ್ದಲ ಮಾಡುತ್ತಿರುವುದು ಕೂಡ ಜಿರಳೆಯೆಂಬ ಅಸಹ್ಯ ರೂಪಕದಿಂದಲೇ ಅಲ್ಲವೇ? ಇವೆಲ್ಲ – ರಾಜಕಾರಣ ಉದ್ದೀಪಿಸುವ ಕೊಳಕಿನ ಪ್ರಭಾವಗಳು. ಇವು ಮಿತಿ ಮೀರಿದಾಗ ರಾಜಕಾರಣ, ರಾಜಕಾರಣಿಗಳೇ ಅಸಹ್ಯವೆನಿಸುವುದು ತಪ್ಪೇನಲ್ಲ ಬಿಡಿ! ಹೆದರಿಕೆ, ತಿರಸ್ಕಾರ, ದ್ವೇಷ ಇತ್ಯಾದಿ ಎಲ್ಲವನ್ನೂ ಮೀರಿ ನಿಲ್ಲುತ್ತದೆ ಅಸಹ್ಯ – ಹೇವರಿಕೆ ! ಏಕಿದು?

ಅಸಹ್ಯ ಎನ್ನುವುದು ವಿಕಸನ ಮಾನವನಿಗೆ ನೀಡಿದ ಅತ್ಯಂತ ಹಳೆಯ ಜೀವ ರಕ್ಷಣಾ ವ್ಯವಸ್ಥೆಗಳಲ್ಲಿ ಒಂದು. ಬ್ಯಾಕ್ಟೀರಿಯಾ, ವೈರಸ್‌ಗಳು ಅಥವಾ ಸೂಕ್ಷ್ಮ ಜೀವಿಗಳ ಅಸ್ತಿತ್ವದ ಬಗ್ಗೆ ಮನುಷ್ಯನಿಗೆ ಯಾವುದೇ ವೈಜ್ಞಾನಿಕ ಅರಿವು ಮೂಡುವುದಕ್ಕೂ ಮುಂಚೆ ನಮ್ಮನ್ನು ಬದುಕಿಸಿದ ಗುಣ ಇದು. ಕೊಳೆತ ಮಾಂಸ, ವಾಸನೆ, ವಾಂತಿ, ಮಲ, ಹಾಳಾದ ಆಹಾರ, ಕಲುಷಿತ ನೀರು, ಸಾಂಕ್ರಾಮಿಕ ರೋಗಗಳು ಅಥವಾ ಸೋಂಕು ಹರಡಬಹುದಾದ ಶವಗಳು – ಇವೆಲ್ಲವೂ ಅಸಹ್ಯ. ಸೂಕ್ಷ್ಮ ಜೀವಿಗಳ ಅಸ್ತಿತ್ವವನ್ನು ವಿಜ್ಞಾನ ಕಂಡುಹಿಡಿಯುವ ಮುನ್ನವೇ, ವಿಕಸನ ಸೋಂಕುಗಳಿಂದ ನಮ್ಮನ್ನು ರಕ್ಷಿಸುವ ಪರಿಹಾರವನ್ನು ಕಂಡು ಕೊಂಡಿತ್ತು. ಅಸಹ್ಯ ಎನ್ನುವುದು ಕಣ್ಣಿಗೆ ಕಾಣದ ಅಪಾಯಗಳನ್ನು ಗುರುತಿಸಿ ನಮ್ಮನ್ನು ರಕ್ಷಿಸುವ ದೇಹದ ಮೊದಲ ಎಚ್ಚರಿಕೆಯ ಗಂಟೆಯಾಗಿ ರೂಪುಗೊಂಡಿತು. ಇವತ್ತಿಗೂ ಅಸಹ್ಯಕರ ಸನ್ನಿವೇಶಗಳು ಅಷ್ಟು ಅಚ್ಚೊತ್ತಿ ನಿಲ್ಲುವುದು, ಪ್ರಭಾವ ಬೀರುವುದು ಆ ಕಾರಣಕ್ಕೆ!


ಸುಮ್ಮನೆ ನಿಮ್ಮ ಸುತ್ತಮುತ್ತ ಒಮ್ಮೆ ಗಮನಿಸಿ. ಮನೆಯೊಳಗೆ – ಯಾವುದೇ ಕೊಳಕು, ಕೊಳೆಯುವ ವಸ್ತು ಅಲ್ಲಿರುವುದಿಲ್ಲ. ಸತ್ತ ಇಲಿ ಜಿರಳೆಗಳನ್ನು ಯಾರೂ ಮನೆಯೊಳಗೆ ಬಿಟ್ಟಿರುವುದಿಲ್ಲ. ಹೊರಗೆ – ಕೇರಿ, ಬೀದಿ, ಬಡಾವಣೆ. ಕೊಳಕುಗಳನ್ನು ನಮ್ಮ ಕಣ್ಣಿಂದಾಚೆ ಇಡುವ ವ್ಯವಸ್ಥೆಯನ್ನೇ ನಾವು ರೂಪಿಸಿಕೊಂಡಿದ್ದೇವೆ. ನಗರಗಳಂತೂ ಈ ಕೊಳಕುಗಳನ್ನು ಹೊರಗಿಡಲು ಸುಸ್ತಾಗಿ ಸೋಲುತ್ತವೆ. ಮನುಷ್ಯ ಸಾಂದ್ರತೆ ಹೆಚ್ಚಿದಂತೆ ಕೊಳಕು ಹೆಚ್ಚುತ್ತದೆ, ಕೊಳಕನ್ನು ಇನ್ನಷ್ಟು ದೂರ ಸಾಗಿಸಬೇಕು.

ಕಸ, ಒಣಕಸ, ಮ, ಮೂ, ಸತ್ತ ದೇಹ, ವೈದ್ಯಕೀಯ ತ್ಯಾಜ್ಯ – ನಾಗರಿಕತೆ ಎಂದರೆ ಇದೆಲ್ಲ ಕೊಳೆಯುವುದನ್ನು, ಅಸಹ್ಯವನ್ನು ಹೊರಗಿಡುವ ಬೃಹತ್ ಯಂತ್ರ. ನಮ್ಮ ಊರಿನಿಂದ, ಹಳ್ಳಿಯಿಂದ ಬಂದವರಿಗೆ ಬೆಂಗಳೂರು ಅತ್ಯಂತ ಕೊಳಕೆನ್ನಿಸುತ್ತದೆ.

ಏಕೆಂದರೆ ಅಲ್ಲಿ ಎಲ್ಲೆಂದರಲ್ಲಿ ಕೊಳಕು ಕಾಣಿಸುತ್ತದೆ. ಇಷ್ಟಾಗಿ – ಬೆಂಗಳೂರಿಂದ ಊರಿಗೆ ರಜೆಗೆ ಹೋದವನಿಗೆ ಅಲ್ಲೆಲ್ಲೋ ರಸ್ತೆಯಲ್ಲಿ ಮಳೆಯಿಂದ ಹರಡಿದ ಸಗಣಿ ಕಂಡು ದೂರದಿಂದ ಸರಿಯುವಾಗ ಚಪ್ಪಲಿಯೊಳಗೆ ಕಾಲು ಜುಮ್ ಅನಿಸುತ್ತದೆ! ಕೊಳಕು ಕೂಡ ಬಿಟ್ಟರೆ ಕ್ರಮೇಣ ಅಭ್ಯಾಸವಾಗುತ್ತದೆ, ಹೊಸ ಕೊಳಕು ಇನ್ನಷ್ಟು ಅಸಹ್ಯವೆನಿಸುತ್ತದೆ. ವಿಚಿತ್ರ.

ಆದರೆ ಜೀವನ ಈ ಕೊಳಕಿನ ಪರದೆಯನ್ನು ಸರಿಸಿ, ಅಸಹ್ಯದ ಪರಿಧಿಯನ್ನು ಮೀರುವ ಸನ್ನಿವೇಶವನ್ನು ಸೃಷ್ಟಿಸಿ ಬಿಡುತ್ತದೆ. ತಂದೆ, ತಾಯಿ ಹಾಸಿಗೆ ಹಿಡಿದು ಬಿಡುತ್ತಾರೆ. ಜೀವನ ಸಂಗಾತಿಗೆ ಕ್ಯಾನ್ಸರ್, ಅಥವಾ ಇನ್ನೇನೋ ಅನಾರೋಗ್ಯ ಬಂದು ಬಿಡುತ್ತದೆ. ವಯಸ್ಸಾದ ಅಜ್ಜ ಅಜ್ಜಿ ದೇಹದ ಅತ್ಯವಶ್ಯ ನಿಯಂತ್ರಣವನ್ನೇ ಕಳೆದುಕೊಂಡು ಬಿಡುತ್ತಾರೆ. ಆಸ್ಪತ್ರೆಯ ವಾಸನೆ, ಗಾಯ, ಔಷಧಿ, ಕೊಳಕಾದ ಹಾಸಿಗೆ – ಇವೆಲ್ಲ ಇಷ್ಟು ಕಾಲ ಆಸ್ಪತ್ರೆಯ ಗೋಡೆಯಾಚೆ ಮರೆಯಲ್ಲಿದ್ದವು ಮನೆಯ ಭಾಗವಾಗಿಬಿಡುತ್ತವೆ! ಯಾವುದೇ ಕುಟುಂಬ ಎದುರಿಸಬಹುದಾದ ಅತ್ಯಂತ ಕಷ್ಟದ ಸನ್ನಿವೇಶ ಇದು. ಒಂದು ಕಡೆ ಕೊಳಕು – ಅಸಹ್ಯ, ಇನ್ನೊಂದು ಕಡೆ ಪ್ರೀತಿ ಕರ್ತವ್ಯ. ಇವೆರಡರ ಮುಖಾಮುಖಿ. ಹಸೆಯಾಳು – ಹಾಸಿಗೆ ಹಿಡಿದವರನ್ನು ನೋಡಿಕೊಳ್ಳುವ ಕೆಲಸವಿದೆಯಲ್ಲ, ಅದು ನಾನಂದು ಕೊಂಡಂತಹ ಅತ್ಯಂತ ಕಷ್ಟದ ಕೆಲಸ.

ಒಬ್ಬ ವ್ಯಕ್ತಿ ಈ ಅಸಹ್ಯವನ್ನು ಮೀರುವುದಿದೆಯಲ್ಲ, ಅದು ಲಕ್ಷಾಂತರ ವರ್ಷದ ವಿಕಸನವನ್ನು ಮೀರುವ ಕೆಲಸ. ಅದನ್ನು ದಿನ, ತಿಂಗಳು, ವರ್ಷಾನುಗಟ್ಟಲೆ ಮಾಡಿದವರು ಬೇರಿನ್ನೆಲ್ಲೋ ಅಲ್ಲ, ನಮ್ಮ ಕುಟುಂಬ – ಸಂಬಂಧಿಕರಲ್ಲೇ ಸಿಕ್ಕಿಬಿಡುತ್ತಾರೆ.



ವಯಸ್ಸಾದ ತಂದೆಯ, ಮಾವನ ದೇಹವನ್ನು ಮೃದುವಾಗಿ ಶುಚಿಗೊಳಿಸುವ ಮಗಳು, ಸೊಸೆ, ತಾಯಿಯ ಮಲಿನವಾದ ಬಟ್ಟೆಗಳನ್ನು ಯಾವುದೇ ಅಸಹ್ಯವಿಲ್ಲದೆ ಬದಲಾಯಿಸುವ ಮಗ, ತಿಂಗಳುಗಟ್ಟಲೆ ಕೀಮೋಥೆರಪಿ ಪಡೆಯುತ್ತಿರುವ ಹೆಂಡತಿಗೆ ತಾಳ್ಮೆಯಿಂದ ಆಹಾರ ತಿನ್ನಿಸುವ ಗಂಡ, ವರ್ಷಗಳ ಕಾಲ ಹಾಸಿಗೆ ಹಿಡಿದ ಗಂಡನ ಆರೈಕೆಯನ್ನು ನಿಸ್ವಾರ್ಥವಾಗಿ ಮಾಡುವ ಹೆಂಡತಿ ಇವರು ಹೊರಗಿನವರಿಗೆ ಸಾಮಾನ್ಯರು. ಇವರ ಹೆಸರುಗಳು ಯಾವತ್ತೂ ಸುದ್ದಿಯಾಗುವುದಿಲ್ಲ; ಇವರಿಗೆ ಪ್ರಶಸ್ತಿಗಳೂ ಸಿಗುವುದಿಲ್ಲ.

ಮಾನವೀಯತೆಯ ಅತ್ಯುನ್ನತ ಸ್ಥಿತಿ ಪ್ರಕಟವಾಗುವುದು ಇಂತಹ ಸಣ್ಣ ಕೊಠಡಿಗಳಲ್ಲಿ. ಅಸಹ್ಯ ಎಂಬ ನಮ್ಮ ಅತ್ಯಂತ ಆಳವಾದ ಸಹಜ ಪ್ರವೃತ್ತಿಯನ್ನು ಪ್ರೀತಿಯ ಬಲದಿಂದ ಮೀರಿ ನಿಲ್ಲುವುದು, ಕರುಣೆಯ ಶ್ರೇಷ್ಠ ರೂಪ. ಆ ವ್ಯಕ್ತಿ ಮಾನವೀಯತೆಯ ಶಿಖರವನ್ನು ಮುಟ್ಟುತ್ತಾನೆ.

ನಿಮಗೇ ನೇರ ಅನುಭವಿದ್ದರೆ ಸರಿ, ಇಲ್ಲದಿದ್ದರೆ ನಿಮಗೆ ಹೇಳಲೇ ಬೇಕು. ಕೆಲ ವರ್ಷದ ಹಿಂದೆ ಹೊರ ದೇಶದಲ್ಲಿ ನನ್ನ ಸ್ನೇಹಿತನೊಬ್ಬ ಅನಾರೋಗ್ಯಕ್ಕೆ ಒಳಗಾದ. ತಿಂಗಳಾನುಗಟ್ಟಲೆ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಲಾಗಿತ್ತು. ಹಗಲಲ್ಲಿ ಆಫೀಸ್ ಮುಗಿಸಿ, ರಾತ್ರಿ ಅವನ ಜೊತೆ ಆಸ್ಪತ್ರೆಗೆ ಹೋಗಿ ಮಲಗುತ್ತಿದ್ದೆ. ಅವನ ದೇಹತ್ಯಾಜ್ಯವನ್ನು ದಾದಿಯರೇ ತೆಗೆಯುತ್ತಿದ್ದರು.

ಆದರೆ ಕೆಲವೊಮ್ಮೆ ರಾತ್ರಿ ಮೂತ್ರದ ಚೀಲ ತುಂಬಿಬಿಡುತ್ತಿತ್ತು. ಅದನ್ನು ಅಪರೂಪಕ್ಕೆ ನಾವೇ ಖಾಲಿ ಮಾಡಬೇಕಿತ್ತು. ಇದನ್ನು ನನ್ನ ಹೆಚ್ಚುಗಾರಿಕೆಗೆ ಹೇಳುತ್ತೇನೆಂದು ತಪ್ಪಾಗಿ ತಿಳಿಯಬೇಡಿ. ಜಗತ್ತಿನ ಅತ್ಯಂತ ಕಷ್ಟದ ಕೆಲಸ ಇದು. ತಮಾಷೆಯ ವಿಷಯವೇ ಅಲ್ಲ. ಮೊದಲ ಬಾರಿ ಮಾಡುವಾಗಲಂತೂ, ಸಾಧ್ಯವೇ ಇಲ್ಲವೆನಿಸಿಬಿಡುತ್ತದೆ! ಯಾರೇ ತಮ್ಮ ಆಪ್ತರು ಹಸೆಯಾಳಾದಾಗ ನೋಡಿಕೊಳ್ಳುತ್ತಾರಲ್ಲ, ಅವರ ಈ – ಅಸಹ್ಯವನ್ನು ಮೀರುವ ಪ್ರಕ್ರಿಯೆ – ಅದೊಂದು ಅತಿಮಾನುಷ ಮಾನವೀಯತೆ. ವಿವೇಕ.


ಆದರೆ ಅಂತಹ ಸನ್ನಿವೇಶದಲ್ಲಿ ಆ ಕೋಣೆಯಲ್ಲಿ ಅತ್ಯಂತ ದೊಡ್ಡ ಅಸಹ್ಯ ಅನುಭವಿಸುತ್ತಿರುವವರು ಆರೈಕೆ ಮಾಡುತ್ತಿರುವವರಷ್ಟೇ ಆಗಿರುವುದಿಲ್ಲ. ಹಾಸಿಗೆಯ ಮೇಲೆ ಮಲಗಿರುವವರು ಅದಕ್ಕಿಂತ ಹೆಚ್ಚಿನ ಒತ್ತಡದಲ್ಲಿರುತ್ತಾರೆ. ಅವರಿಗೆ ಕೂಡ ಎಲ್ಲವೂ ಕಾಣಿಸುತ್ತಿರುತ್ತದೆ. ವಾಸನೆ ಗೊತ್ತಾಗುತ್ತದೆ. ಮಗಳು ಬಾಗಿಲಲ್ಲಿ ಒಂದರೆಕ್ಷಣ ನಿಂತು ಉಸಿರೆಳೆದುಕೊಂಡು ಒಳಬಂದದ್ದೂ ಗೊತ್ತಾಗುತ್ತದೆ. ಇಷ್ಟು ವರ್ಷ ಈ ಮನೆಯನ್ನು ಕಟ್ಟಿದ ದೇಹ ಇವತ್ತು ಈ ಮನೆಯ ಕೊಳಕಿನ ಮೂಲವಾಗಿಬಿಟ್ಟಿದೆ ಎನ್ನುವುದೂ ತಿಳಿದಿರುತ್ತದೆ.

ಕೊನೆಯ ದಿನಗಳಲ್ಲಿ ಮನುಷ್ಯನನ್ನು ಕಾಡುವುದು ಸಾವಿನ ಭಯವಲ್ಲ, ನಾನು ಇವರಿಗೆ ಅಸಹ್ಯವಾಗಿಬಿಟ್ಟೆ ಎಂಬ ಯೋಚನೆ. ಅದೇ ಕಾರಣಕ್ಕೆ ಅಪ್ಪ ಬೇಡ ಬಿಡು, ನಾನೇ ಮಾಡಿಕೊಳ್ಳುತ್ತೇನೆ ಎಂದು ಆಗದ ಕೈಯನ್ನು ಎತ್ತಲು ಹೋಗುತ್ತಾನೆ.

ಅದೇ ಕಾರಣಕ್ಕೆ ಅಮ್ಮ ಇವತ್ತು ನೀನು ಬರುವುದು ಬೇಡ, ಸುಸ್ತಾಗಿರುತ್ತೀಯ ಎನ್ನುತ್ತಾಳೆ. ಅದೆಷ್ಟೋ ಬಾರಿ ಮಗಳು, ಸೊಸೆ ಬರೀ ಶುಚಿ ಗೊಳಿಸುವ ಕೆಲಸವನ್ನಷ್ಟೇ ಮಾಡಿರುವುದಿಲ್ಲ, ಹೆಚ್ಚಿನ ಮಾತಾಡದೆ, ಮುಖ ಕಿವುಚದೆ, ಸಹಜವಾಗಿ ಕೆಲಸ ಮುಗಿಸಿ, ದಿಂಬು ಸರಿಮಾಡಿ ಹೊರಡುವ ಆ ಒಂದು ಕ್ರಿಯೆಯ ಮೂಲಕ ಅವಳು ನೀವು ಕೊಳಕಲ್ಲ ಎನ್ನುವುದನ್ನು ವ್ಯಕ್ತಪಡಿಸಲು ಹೆಣಗಾಡುತ್ತಾಳೆ.

ಆ ಕಾರಣಕ್ಕೆ ಆಸ್ಪತ್ರೆಯ ನರ್ಸ್, ಮರಣಶಯ್ಯೆಯಲ್ಲಿರುವವರನ್ನು ನೋಡಿಕೊಳ್ಳುವ ದಾದಿಯರು ಇವರೆಲ್ಲರದ್ದು ಉದ್ಯೋಗವಲ್ಲ, ಸೇವೆ.

**– ಶಿಶಿರ್** ಹೆಗಡೆ




## ಅತ್ತಾಗ ಕಣ್ಣೀರು ಬರೋದು ಯಾಕೆ ಗೊತ್ತಾ?

ನಗು ಎಷ್ಟು ಸಹಜವೋ, ಅಳು ಕೂಡ ಅಷ್ಟೇ ಸಹಜ. ಸಿಕ್ಕಾಪಟ್ಟೆ ಬೇಸರವಾದಾಗ, ನೋವಾದಾಗ ಅಥವಾ ಅತಿಯಾದ ಸಂತೋಷ ತಡೆಯಲಾರದೆ ಹೋದಾಗ ಕಣ್ಣುಗಳು ತೇವವಾಗುತ್ತವೆ. ಆದರೆ, ನಾವು ಅತ್ತಾಗ ಕಣ್ಣಲ್ಲಿ ನೀರು ಯಾಕೆ ಬರುತ್ತೆ? ಅಂತ ಯಾವತ್ತಾದರೂ ಯೋಚಿಸಿದ್ದೀರಾ? ಇದಕ್ಕೆ ವಿಜ್ಞಾನದ ಬಳಿ ಒಂದು ಮಸ್ತ್ ಉತ್ತರವಿದೆ! ಬನ್ನಿ, ನಮ್ಮ ಕಣ್ಣೀರಿನ ಹಿಂದಿರುವ ಆ ರಹಸ್ಯವನ್ನು ಸರಳವಾಗಿ ತಿಳಿದುಕೊಳ್ಳೋಣ.

ಕಣ್ಣೀರಿನ ಫ್ಯಾಕ್ಟರಿ ಲ್ಯಾಕ್ರಿಮಲ್ ಗ್ರಂಥಿ: ನಮ್ಮ ಕಣ್ಣುಗಳ ಮೇಲ್ಭಾಗದಲ್ಲಿ ಲ್ಯಾಕ್ರಿಮಲ್ ಗ್ರಂಥಿ ಎಂಬ ಪುಟ್ಟ ನೀರಾವರಿ ವ್ಯವಸ್ಥೆ ಇದೆ. ಇದೊಂದು ಕಣ್ಣೀರಿನ ಫ್ಯಾಕ್ಟರಿ ಇದ್ದಂತೆ! ಈ ಗ್ರಂಥಿಯು ಕೇವಲ ನೀರನ್ನಷ್ಟೇ ಅಲ್ಲದೆ, ಅದರಲ್ಲಿ ಸ್ವಲ್ಪ ಉಪ್ಪು, ಪ್ರೋಟೀನ್ ಮತ್ತು ಜಿಡ್ಡಿನಂಶ (ಎಣ್ಣೆಯಂಶ) ಇರುವ ದ್ರವವನ್ನು ತಯಾರಿಸುತ್ತದೆ. ಇದೇ ನಮಗೆ ಕಣ್ಣೀರಿನ ರೂಪದಲ್ಲಿ ಹೊರಬರುತ್ತದೆ.

ನಮ್ಮ ಮೆದುಳಿನ ಪ್ರಮುಖ ಭಾಗವಾದ ಸೆರೆಬ್ರಮ್ ನಮ್ಮ ಭಾವನೆಗಳನ್ನು ಕಂಟ್ರೋಲ್ ಮಾಡುತ್ತದೆ. ನಮಗೆ ದುಃಖ, ಭಯ ಅಥವಾ ಅತಿಯಾದ ಖುಷಿಯಾದಾಗ ಈ ಸೆರೆಬ್ರಮ್ ಆಕ್ಟಿವ್ ಆಗುತ್ತದೆ. ಭಾವನೆಗಳು ನಮ್ಮ ಕಂಟ್ರೋಲ್ ತಪ್ಪಿದಾಗ, ಮೆದುಳು ತಕ್ಷಣವೇ ಲ್ಯಾಕ್ರಿಮಲ್ ಗ್ರಂಥಿಗೆ ಹೇಯ್, ಬೇಗ ನೀರು ಬಿಡು! ಎಂದು ಸಿಗ್ನಲ್ ಕಳುಹಿಸುತ್ತದೆ. ಆಗ ಕಣ್ಣೀರು ಉಕ್ಕಿ ಹರಿಯುತ್ತದೆ. ಇದನ್ನೇ ವಿಜ್ಞಾನಿಗಳು ಭಾವನಾತ್ಮಕ ಅಳು ಅಂತ ಕರೆಯುತ್ತಾರೆ.

ಒಳ್ಳೆದಾಗಲಿ, ಮನಸ್ಸು ಬಿಚ್ಚಿ ಅತ್ತುಬಿಡು... ಹಗುರಾಗುತ್ತೀಯಾ ಎಂದು ಹಿರಿಯರು ಹೇಳುವುದನ್ನು ಕೇಳಿರುತ್ತೀರಿ. ಇದರ ಹಿಂದೆ ದೊಡ್ಡ ವೈಜ್ಞಾನಿಕ ಸತ್ಯವಿದೆ. ನಾವು ಅಳುವಾಗ ದೇಹದಲ್ಲಿ ಉತ್ಪತ್ತಿಯಾಗುವ ಕೆಲವು ಬೇಡದ, ಹಾನಿಕಾರಕ ರಾಸಾಯನಿಕಗಳು ಕಣ್ಣೀರಿನ ಮೂಲಕ ಹೊರಹೋಗುತ್ತವೆ. ಇದರಿಂದ ಒತ್ತಡ ಕಡಿಮೆಯಾಗಿ, ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಅದಕ್ಕೇ ಅತ್ತರೆ ಮನಸ್ಸು ಹಗುರಾಗುವುದು ಸುಳ್ಳಲ್ಲ!

ಕಣ್ಣೀರು ಕೇವಲ ಅತ್ತಾಗ ಮಾತ್ರ ಬರಲ್ಲ, ಕಣ್ಣಿಗೆ ತೊಂದರೆಯಾದಾಗಲೂ ಧಾವಿಸಿ ಬರುತ್ತದೆ. ಕಣ್ಣಿಗೆ ಧೂಳು ಬಿದ್ದಾಗ, ಹೊಗೆ ತಗುಲಿದಾಗ ಅಥವಾ ಈರುಳ್ಳಿ ಹೆಚ್ಚುವಾಗ ಕಣ್ಣು ಉರಿಯುತ್ತದೆ. ತಕ್ಷಣವೇ ಕಣ್ಣಿನ ಕಾರ್ನಿಯಾದಲ್ಲಿರುವ ನರಗಳು ಮೆದುಳಿಗೆ ಡೇಂಜರ್! ಎಂದು ಸಂದೇಶ ರವಾನಿಸುತ್ತವೆ. ಮೆದುಳು ಕ್ಷಣಾರ್ಧದಲ್ಲಿ ಕಣ್ಣೀರನ್ನು ಹರಿಸಿ, ಕಣ್ಣಿಗೆ ಸೇರಿದ ಕಸ ಅಥವಾ ರಾಸಾಯನಿಕಗಳನ್ನು ತೊಳೆದು ಹೊರಹಾಕುತ್ತದೆ.

ನೆನಪಿಡಿ: ಅಳುವುದು ದೌರ್ಬಲ್ಯದ ಸಂಕೇತವೇ ಅಲ್ಲ! ಅದು ನಮ್ಮ ಕಣ್ಣುಗಳನ್ನು ಸ್ವಚ್ಛವಾಗಿಡಲು ಮತ್ತು ಮನಸ್ಸನ್ನು ಬ್ಯಾಲೆನ್ಸ್ ಮಾಡಲು ಪ್ರಕೃತಿ ನೀಡಿರುವ ಅತ್ಯದ್ಭುತ ವಿಜ್ಞಾನ ಮತ್ತು ರಕ್ಷಣಾ ವ್ಯವಸ್ಥೆ. ಹಾಗಾಗಿ, ಒಮ್ಮೊಮ್ಮೆ ಅಳು ಬಂದರೆ ತಡೆಯಬೇಡಿ, ಮನಸಾರೆ ಅತ್ತುಬಿಡಿ!

**– ಕೆ.ಪಿ.ಅಶ್ವಿನ್** ರಾವ್

## ಚಾಲನೆಗೊಂದು ಟ್ರಿಗರ್!

ಬಚ್ಚಲಿಗೆ ಹೋಗಿ ಬಕೆಟ್‌ಗೆ ನೀರು ಬಿಟ್ಟು ನಿಲ್ಲಿಸಿ ಸ್ನಾನಕ್ಕೆ ಹೋಗು ಎಂದ. ಈಗ ಪರಿಸ್ಥಿತಿ ಬದಲಾಯಿತು ಇದು ಬರೀ ಮಾತಲ್ಲ, ಇದು ಸಮಯದ ಜೊತೆ ಕಟ್ಟಿಬಿದ್ದ ಕೆಲಸ. ನೀರು ತುಂಬುತ್ತಲೇ ಇರುತ್ತದೆ, ಚೆಲ್ಲಿ ಹೋಗುತ್ತದೆ, ಮತ್ತೆ ಅಪ್ಪನ ಬೈಗುಳ ಬರುತ್ತದೆ. ಮಗಳು ಎದ್ದಳು.

ಬೆಳಿಗ್ಗೆ ಆಯ್ತು, ಏಳ್ರೋ ಮೇಲೆ ಎಂದು ಕೂಗುತ್ತಲೇ ತನ್ನ ಕೆಲಸ ಮುಂದುವರೆಸಿದಳು ವನಜ. ಕೂಗು ಗೋಡೆಗೆ ಬಡಿದು ವಾಪಸ್ ಬಂದಂತಾಯಿತೇ ಹೊರತು ಒಳಗೆ ಮಲಗಿದ್ದ ಇಬ್ಬರು ಮಕ್ಕಳ ಕಿವಿಗೆ ತಾಗಿದಂತೆ ಕಾಣಲಿಲ್ಲ. ಏಳಲೇಬೇಕಾ ಎಂದು ಪ್ರಶ್ನಿಸುವಂತೆ ಇಬ್ಬರೂ ಇನ್ನೂ ಗಾಢ ನಿದ್ರೆಯಲ್ಲಿ ಮುದುರಿಕೊಂಡಿದ್ದರು. ಮಹೇಶ ಒಳಗೆ ಹೋಗಿ ಇಬ್ಬರನ್ನೂ ಸರದಿಯಂತೆ ಅಲುಗಾಡಿಸಿ ಏಳಿ, ಏಳಿ ಎಂದ. ಪ್ರಯೋಜನ ಸೊನ್ನೆ.

ಕೊನೆಗೂ ಒಬ್ಬೊಬ್ಬರಾಗಿ ಎದ್ದರು ಆದರೆ ಎದ್ದಿದ್ದೇ ಒಂದು ಸಾಧನೆ ಎಂಬಂತೆ, ಮುಂದೇನು ಮಾಡಬೇಕು ಎಂಬ ಯೋಚನೆಯೇ ಇಲ್ಲದೆ ಟಿವಿ ಮುಂದೆ ಕುಳಿತುಬಿಟ್ಟರು. ಕೈಗೆ ಹಾಲಿನ ಲೋಟ ಬಂದಿತು, ಕಣ್ಣು ಪರದೆಯ ಮೇಲೆ ನೆಟ್ಟಂತೆಯೇ ಗುಟುಕರಿಸಿ ಲೋಟವನ್ನ ಪಕ್ಕದಲ್ಲೇ ಇಟ್ಟು ಮತ್ತೆ ಅದೇ ಭಂಗಿಯಲ್ಲಿ ಕುಳಿತಾಯಿತು. ಸಮಯ ಸರಿಯುತ್ತಿತ್ತು, ಆದರೆ ಮನೆಯೊಳಗಿನ ಈ ಇಬ್ಬರಿಗೆ ಗಡಿಯಾರದ ಜೊತೆ ಯಾವ ಸಂಬಂಧವೂ ಇಲ್ಲದಂತಿತ್ತು.

ಮಗಳನ್ನು ಚಲನೆಗೆ ತರಲು ಮಹೇಶಗೆ ಉಪಾಯ ಹೊಳೆಯಿತು. ಬಚ್ಚಲಿಗೆ ಹೋಗಿ ಬಕೆಟ್‌ಗೆ ನೀರು ಬಿಟ್ಟು ನಿಲ್ಲಿಸಿ ಸ್ನಾನಕ್ಕೆ ಹೋಗು ಎಂದ. ಈಗ ಪರಿಸ್ಥಿತಿ ಬದಲಾಯಿತು ಇದು ಬರೀ ಮಾತಲ್ಲ, ಇದು ಸಮಯದ ಜೊತೆ ಕಟ್ಟಿಬಿದ್ದ ಕೆಲಸ. ನೀರು ತುಂಬುತ್ತಲೇ ಇರುತ್ತದೆ, ಚೆಲ್ಲಿ ಹೋಗುತ್ತದೆ, ಮತ್ತೆ ಅಪ್ಪನ ಬೈಗುಳ ಬರುತ್ತದೆ. ಮಗಳು ಎದ್ದಳು. ಮಗನನ್ನು ಏಳಿಸಲು ಬೇರೊಂದೇ ಅಸ್ತ್ರ, ಸ್ಮಾರ್ಟ್ ಆ್ಯಪ್‌ನಿಂದ ಟಿವಿ ಆಫ್ ಮಾಡಿದ್ದೇ ತಡ, ಪರದೆ ಕಪ್ಪಾಗುತ್ತಲೇ ಅವನಿಗೂ ಎಚ್ಚರ.

ಇಲ್ಲಿ ಗಮನಿಸಬೇಕಾದ ಸಂಗತಿ ಇಷ್ಟೇ: ಮಕ್ಕಳಿಗೆ ಮುಂದೆ ತಾವು ಏನು ಮಾಡಬೇಕು ಎಂಬ ಸ್ಪಷ್ಟತೆಯೇ ಇರಲಿಲ್ಲ. ಎಚ್ಚರ ಆದದ್ದೇ ಒಂದು ಗುರಿ ಇಲ್ಲದ ಸ್ಥಿತಿ. ಎದ್ದ ಮೇಲೆ ಏನು ಎಂಬ ಪ್ರಶ್ನೆಗೆ ಉತ್ತರವಿಲ್ಲದಿದ್ದಾಗ, ಮನಸ್ಸು ಸಹಜವಾಗಿ ಅತ್ಯಂತ ಸುಲಭವಾದ, ಅತ್ಯಂತ ಆಕರ್ಷಕವಾದ ಟಿವಿಯ ಕಡೆಗೆ ಜಾರುತ್ತದೆ. ಆದರೆ ಬಕೆಟ್ ನೀರಿನಂತ ಒಂದು ಸ್ಪಷ್ಟ, ಸಮಯಬದ್ಧ ಕೆಲಸ ಎದುರಿಗಿಟ್ಟ ಕೂಡಲೇ ಆ ಜಡತ್ವ ಮಾಯವಾಗುತ್ತದೆ.

ದೊಡ್ಡವರಿಗೂ ಇದೇ ಕಥೆ


ಇದನ್ನ ಬರೀ ಮಕ್ಕಳ ಕಥೆ ಎಂದು ಮುಗಿಸಿಬಿಡುವಂತಿಲ್ಲ. ದೊಡ್ಡವರ ಮನೆಯೊಳಗೂ, ಮನಸ್ಸಿನೊಳಗೂ ಇದೇ ನಾಟಕ ಪ್ರತಿದಿನ ನಡೆಯುತ್ತಿರುತ್ತದೆ ಪಾತ್ರಗಳಷ್ಟೇ ಬದಲು. ಬೆಳಿಗ್ಗೆ ಎದ್ದ ಕೂಡಲೇ ಏನು ಮಾಡಬೇಕು ಎಂಬ ಸ್ಪಷ್ಟತೆ ಇಲ್ಲದವರು ಫೋನ್ ಎತ್ತಿಕೊಂಡು ಸುಮ್ಮನೆ ಸ್ಕ್ರೋಲ್ ಮಾಡುತ್ತಾ ಕುಳಿತುಬಿಡುತ್ತಾರೆ ಮಕ್ಕಳು ಟಿವಿ ಮುಂದೆ ಕುಳಿತಂತೆಯೇ. ಆಫೀಸಿನಲ್ಲಿ ಡೆಡ್ಲೈನ್ ಇಲ್ಲದ ಕೆಲಸ ವಾರಗಟ್ಟಲೆ ಪೆಂಡಿಂಗ್ ಆಗಿ ಉಳಿಯುತ್ತದೆ; ಅದೇ ಕೆಲಸಕ್ಕೆ ನಾಳೆ ಮಧ್ಯಾಹ್ನ ಮೀಟಿಂಗ್ ಎಂಬ ಬಕೆಟ್ ನೀರು ಸಿಕ್ಕ ಕೂಡಲೇ ರಾತ್ರೋರಾತ್ರಿ ಮುಗಿದುಹೋಗುತ್ತದೆ. ಇದು ಸೋಮಾರಿತನವಲ್ಲ ಇದು ಮುಂದಿನ ಹೆಜ್ಜೆ ಏನೆಂಬ ಸ್ಪಷ್ಟತೆಯ ಕೊರತೆ.

ಮನಸ್ಸಿಗೆ ಸ್ವಂತ ಗಡಿಯಾರವಿಲ್ಲ. ಅದಕ್ಕೆ ಹೊರಗಿನಿಂದ ಒಂದು ಟ್ರಿಗರ್ ಬೇಕು ಬಕೆಟ್ ನೀರಿನ ಸದ್ದೋ, ಟಿವಿ ಆಫ್ ಆದ ಕತ್ತಲೆಯೋ, ಅಥವಾ ಒಂದು ಪಟ್ಟಿಯ ಮೇಲೆ ಬರೆದಿಟ್ಟ ಸಾಲೋ. ಟ್ರಿಗರ್ ಇಲ್ಲದಿದ್ದಾಗ ಮನಸ್ಸು ಜಡವಾಗಿಯೇ ಇರುತ್ತದೆ; ಒಂದು ಇದ್ದ ಕೂಡಲೇ ಚಲನೆಗೆ ಬರುತ್ತದೆ.

ಪರಿಹಾರ: ಒಂದು ಟುಡು ಲಿಸ್ಟ್ ಇಲ್ಲಿ ಟುಡು ಲಿಸ್ಟ್ ಎಂಬುದು ಬರೀ ಒಂದು ಪಟ್ಟಿಯಲ್ಲ ಅದು ಮಹೇಶನ ಬಕೆಟ್ ನೀರಿನಂತೆ, ಮನಸ್ಸಿಗೆ ಮುಂದಿನ ಹೆಜ್ಜೆ ಇದು ಎಂದು ತೋರಿಸುವ ಒಂದು ಸಾಧನ. ದೊಡ್ಡ, ಅಸ್ಪಷ್ಟ ಗುರಿಗಳ ಬದಲು ಮೊದಲನೆಯದಾಗಿ ಇಷ್ಟು ಮಾಡು ಎಂಬಂತೆ ಚಿಕ್ಕ, ಸ್ಪಷ್ಟ, ಸಮಯಬದ್ಧ ಹೆಜ್ಜೆಗಳಾಗಿ ಒಡೆದಿಟ್ಟರೆ, ಬೆಳಿಗ್ಗೆ ಎದ್ದ ಕೂಡಲೇ ಟಿವಿಯ ಆಕರ್ಷಣೆಗೆ ಬೀಳುವ ಬದಲು ಪಟ್ಟಿಯ ಮೊದಲ ಸಾಲಿನ ಕಡೆಗೆ ಕೈ ಹೋಗುತ್ತದೆ.

ಮೂರು ಸಣ್ಣ ಟ್ರಿಕ್‌ಗಳು ಇದನ್ನು ಇನ್ನಷ್ಟು ಪರಿಣಾಮಕಾರಿ ಮಾಡುತ್ತವೆ: ಹಿಂದಿನ ರಾತ್ರಿಯೇ ಬರೆದಿಡುವುದು ಬೆಳಿಗ್ಗೆ ಎದ್ದು ಯೋಚಿಸುವ ಜಡತ್ವವನ್ನೇ ತಪ್ಪಿಸುತ್ತದೆ. ಮೊದಲ ಹೆಜ್ಜೆ ಅತಿ ಚಿಕ್ಕದಾಗಿರುವುದು ವರದಿ ಬರೆಯುವುದು ಅಲ್ಲ, ವರದಿಯ ಮೊದಲ ಪ್ಯಾರಾ ಬರೆಯುವುದು ಬಕೆಟ್‌ಗೆ ಒಂದೇ ಸಲ ನೀರು ತುಂಬುವ ಬದಲು, ಮೊದಲ ಹನಿ ಬಿದ್ದ ಕೂಡಲೇ ಚಲನೆ ಶುರುವಾಗುತ್ತದೆ. ಕಣ್ಣಿಗೆ ಕಾಣುವಂತೆ ಇಡುವುದು ಪಟ್ಟಿ ಫೋನಿನೊಳಗೆ ಹೂತುಹೋಗದೆ ಎದುರಿಗೆ, ಟೇಬಲ್ ಮೇಲೆ ಇದ್ದರೆ ಅದೇ ಒಂದು ಸ್ಮಾರ್ಟ್ ಆ್ಯಪ್ ಆಫ್ ಆದ ಟಿವಿಯಷ್ಟೇ ಪರಿಣಾಮಕಾರಿ ಎಚ್ಚರಿಕೆ.

ಕೊನೆಗೆ, ಮಕ್ಕಳಿಗೂ ದೊಡ್ಡವರಿಗೂ ಇರುವ ವ್ಯತ್ಯಾಸ ಇಷ್ಟೇ ಮಕ್ಕಳಿಗೆ ಬಕೆಟ್ ನೀರು ಬಿಡುವವರು ಬೇರೊಬ್ಬರಿರುತ್ತಾರೆ; ದೊಡ್ಡವರು ತಮ್ಮ ಬಕೆಟ್‌ಗೆ ತಾವೇ ನೀರು ಬಿಟ್ಟುಕೊಳ್ಳಬೇಕು. ಟುಡು ಲಿಸ್ಟ್ ಎಂಬುದು ಆ ಸ್ವಯಂ-ನಿರ್ಮಿತ ಬಕೆಟ್ ನೀರೇ.




ಹಳೆಯ ಶೈಕ್ಷಣಿಕ ವರ್ಷಕ್ಕೆ ವಿದಾಯ ಹೇಳಿ ಹೊಸ ಶೈಕ್ಷಣಿಕ ವರ್ಷವನ್ನು ಸ್ವಾಗತಿಸುವ ತರಾತುರಿಯಲ್ಲಿ, ಎಷ್ಟೋ ಕೆಲಸಗಳು ಚಲಿಸುವ ಗತಿ ನಿಧಾನವಾಯಿತು. ಆದ ಕಾರಣ ಕಥೆಗಳನ್ನು ಹಚ್ಚಿಕೊಳ್ಳಲು ಸಮಯವೇ ಸಿಕ್ಕಲಿಲ್ಲ.

ಮಕ್ಕಳು ಪರೀಕ್ಷೆ, ನಂತರ ಫಲಿತಾಂಶ, ಮರುಪರೀಕ್ಷೆ, ಅದರ ಫಲಿತಾಂಶ, ಸಂಭ್ರಮ, ಮುಂದಿನ ವಿದ್ಯಾಭ್ಯಾಸದ ತಯಾರಿಗಳ ಬಗ್ಗೆ ಯೋಚನೆಯಲ್ಲೇ ಮುಳುಗಿರುವ ವಿದ್ಯಾರ್ಥಿಗಳು, ಶಾಲೆಯ ಮರು ದಾಖಲಾತಿ,




## ವಯಸ್ಸು ಚಿಕ್ಕದಾದರೂ ಆಲೋಚನೆ ದೊಡ್ಡದು!

ಅದರ ನಡುವೆ ಹಲವು ತರಬೇತಿಗಳು, ಬೇಸಿಗೆ ಶಿಬಿರಗಳು, ಅಬ್ಬಬ್ಬಾ ಇಷ್ಟೆಲ್ಲ ಕೆಲಸಗಳು.. ನಂತರ ಮಧ್ಯದಲ್ಲಿ 10 ದಿನದ ಬೇಸಿಗೆ ರಜೆಯ ವೇಳಾಪಟ್ಟಿಯ ದಿನಚರಿ.. ಎಲ್ಲವನ್ನು ಮುಗಿಸಿ ಮತ್ತೆ ಶಾಲೆ ಎಂದಿನಂತೆ ಶುರು.. ಪೋಷಕರಿಗೆಲ್ಲಾ ಕರೆ ಮಾಡುವುದು, ದಾಖಲಾತಿ ಬಗ್ಗೆ ಮಾಹಿತಿ, ಹೀಗಿರುವಾಗ ಮುಂದಿನ ತರಗತಿಯ ದಾಖಲಾತಿಗೆಂದು ಒಂದು ಮಗು ಶಾಲೆಗೆ ಬಂದಾಗ, ನರ್ಸರಿ ಟೀಚರ್ಸ್ ಕುಳಿತಿರುವ ಜಾಗಕ್ಕೆ ಓಡಿ ಬಂದಿತು... ಮಿಸ್,,, ಮಿಸ್,,, ನಾನು ಇವತ್ತು ಬಂದೇ..... ನೀವೆಲ್ಲ ಹೇಗಿದೀರಿ? ಎಂದು ಕ್ಷೇಮ ಸಮಾಚಾರ ವಿಚಾರಿಸಿ ರಜೆಯಲ್ಲಿ ನಡೆದ ಎಲ್ಲಾ ಕಥೆಗಳನ್ನು ನಮ್ಮ ಬಳಿ ಹಂಚಿಕೊಂಡಿತು.. ಅಪ್ಪ ಕೊಡಿಸಿದ ಆಟಿಕೆಯ ಕಥೆ, ಅಮ್ಮ ಮಾಡಿದ ಹೊಸ ತಿಂಡಿಯ ಕಥೆ, ಅಜ್ಜಿ ಮನೆಗೆ ಹೋದಾಗ ಅಜ್ಜಿ ಹೇಳಿದ ಕಥೆಯ ಕಥೆ, ಹೀಗೆ ಎಲ್ಲವನ್ನು ಒಮ್ಮೆಲೇ ಹೇಳಿ ಜೊತೆಗೆ ನಾನು ಕೇಳಿದ ಪ್ರಶ್ನೆಗಳಿಗೂ ಸಾರಾಗವಾಗಿ ಉತ್ತರಿಸಿ, ಪೋಷಕರ ಬಳಿ ಓಡಿತು.. ನಂತರ ಪೋಷಕರ ಬಳಿ ಮಾತನಾಡುವಾಗ ಅವರು ಹೇಳಿದರು, ಮೇಡಂ ಇವನಿಗೆ ನೀವು ಎಂದರೆ ತುಂಬಾ ಇಷ್ಟ ಅಂತೇ.. ಮುಂದಿನ ತರಗತಿಯಲ್ಲೂ ನೀವೇ ಬೇಕಂತೆ, ಮನೆಯಲ್ಲಿ ಹೇಳುತಿದ್ದ ಎಂದು ಹೇಳಿದರು.. ಅಯ್ಯೋ ಹಾಗಾದ್ರೆ ಇರಿ ನಾನೇ ಅವನನ್ನ ಮಾತಾಡಿಸ್ತೇನೆ ಎಂದು ಅವನನ್ನು ಕೂಗಿ ಕರೆದು ಹೇಳಿದೆ ಏನೂ ಮಾರಾಯ ನಿನಗೆ ಮುಂದಿನ ವರ್ಷವೂ ನಾನೇ ಟೀಚರ್ ಆಗ್ಬೇಕಾ? ಹಾಗಾದ್ರೆ ಒಂದು ಕೆಲಸ ಮಾಡು ನಿನಗೆ ನಾ ಅಂದ್ರೆ ಇಷ್ಟ ಅಲ್ವಾ? ಇನ್ನೊಂದು ವರ್ಷ ಅದೇ ತರಗತಿಯಲ್ಲೇ ಇದ್ದು ಬಿಡು... ಏನಂತೀಯಾ??? ಎಂದು ಕೇಳಿದೆ. ಆಗ ಅವನು ನೀಡಿದ ಉತ್ತರ ತುಂಬಾ ಸರಳ, ಸುಂದರ, ಅರ್ಥಗರ್ಭಿತ ಹಾಗು ಪ್ರೌಢತೆಯಿಂದ ಕೂಡಿತ್ತು.. ಅವನು ಹೇಳಿದ ಮಿಸ್ ನೀವಂದ್ರೆ ನನಗೆ ಇಷ್ಟ ಹೌದು ಆದ್ರೆ, ನಾನು ಮತ್ತೆ ಅದೇ ತರಗತಿಲಿ ಕೂರೋದಿಲ್ಲಪ್ಪಾ, ನಾನು ಮುಂದೆ ಹೋಗ್ಬೇಕು, ಪಾಸ್ ಆಗ್ಬೇಕು, ದೊಡ್ಡೋನಾಗ್ಬೇಕು, ನೀವೇ ನನ್ನ ತರಗತಿಗೆ ಬನ್ನಿ ಎಂದು.. ಕೇಳಲು ಬಹಳ ಸರಳ ಆದರೆ ಅದರಲ್ಲಿ ಎಷ್ಟು ಅರ್ಥ ತುಂಬಿದೆ. ಆಳವಾಗಿ ಯೋಚಿಸಿದರೆ ಎಷ್ಟು ಅರ್ಥ ಅಡಗಿದೆ..

ಆ 6 ವರ್ಷದ ಮಗುವು ತುಂಬಾ ವಿಶ್ಲೇಷಣೆ ಕೊಡಲು ಆಗದೇ ಹೋದರೂ ಸಹ ತನ್ನದೇ ಶೈಲಿಯಲ್ಲಿ, ಅರ್ಥ ಮಾಡಿಸುವ ಪ್ರಯತ್ನ ಮಾಡಿದ್ದ.. ಯಾವುದೇ ಆಗಲಿ ನಮಗೆ ಇಷ್ಟ ಎಂದು ಅತೀ ಮೋಹದಿಂದ ಇದ್ದರೆ ನಾವು ಮುಂದೆ ಹೋಗಲು ಸಾಧ್ಯವಿಲ್ಲ ಎಂಬುವ ನೀತಿ ಪಾಠವನ್ನು ಅವನು ತನ್ನ ಮಾತಿನಿಂದ ವ್ಯಕ್ತಪಡಿಸಿದ್ದ. ಮಕ್ಕಳ ಮಾತು ತಮಾಷೆಯಂತೆ ಕಂಡರೂ ಅದರಲ್ಲಿ ಕೆಲವೊಮ್ಮೆ ಗಂಭೀರತೆ ಅಡಗಿರುತ್ತದೆ.. ಆ ಮಗುವಿನ ಮಾತಿನಿಂದ ನಾವೇನು ತಿಳಿಯಬಹುದು ಎಂದರೆ...

ತೀವ್ರವಾದ ಮೋಹ, ಆಸೆ, ಮನುಷ್ಯನ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು. ನಮ್ಮ ಬೆಳವಣಿಗೆಗಾಗಿ ಕೆಲವೊಮ್ಮೆ ನಾವು ಎಷ್ಟೋ ಆಸೆಗಳನ್ನು, ಇಷ್ಟಗಳನ್ನು, ಮೋಹಗಳನ್ನು, ಬಿಟ್ಟು ಅವುಗಳ ನೆನಪಿನೊಂದಿಗೆ ಮುಂದೆ ಸಾಗಬೇಕು ಎನ್ನುವುದು.

**– ರಮ್ಯಾ ಆರ್ ಭಟ್,** ಕುಂದಾಪುರ

## ನಾಯಿಮರಿ

ಮಳೆ ತುಂಬಾ ಜೋರಾಗಿತ್ತು. ಮಾನಸನಿಗೆ ಮನೆ ತಲುಪಬೇಕಿತ್ತು. ಇದ್ದ ಒಂದು ಸಣ್ಣ ಕೊಡೆಯಲ್ಲಿ ತನ್ನ ಮೈ ಅಕ್ಕಪಕ್ಕ ಒದ್ದೆ ಆಗ್ತಾಯಿದ್ರು ಬ್ಯಾಗನ್ನು ಗಟ್ಟಿ ಹಿಡಿದುಕೊಂಡು ಮನೆ ಕಡೆಗೆ ಹೆಜ್ಜೆ ಇಡುತ್ತಿದ್ದಳು. ಬೀಡನಗುಡ್ಡೆ ದಾಟಿ ಚಿಟ್ಪಾಡಿ ತಲುಪುವಷ್ಟರಲ್ಲಿ ಮಳೆ ಅವಳನ್ನು ಒದ್ದೆಯಾಗಿಸುವುದಕ್ಕಂತಲೇ ಬಿರುಸನ್ನ ಹೆಚ್ಚು ಮಾಡ್ತಾ ಹೋಯ್ತು. ಆಗಲೇ ಹನುಮಾನ್ ಗ್ಯಾರೇಜ್ ಪಕ್ಕದಲ್ಲಿ ಪುಟ್ಟ ಕೂಗೊಂದು ಕೇಳಿ ಬಂತು. ಚರಂಡಿಯಲ್ಲಿ ಹರಿದು ಹೋಗುತ್ತಿದ್ದ ಕೆಂಪು ನೀರಿನಲ್ಲಿ ಪುಟ್ಟ ನಾಯಿಮರಿಯೊಂದು



ಜೀವವನ್ನು ಉಳಿಸುವುದಕ್ಕೆ ಸುತ್ತ ನೋಡುತ್ತಾ ತೇಲುತ್ತಿತ್ತು. ಮೊದಲೇ ಪ್ರಾಣಿ ಎಂದರೆ ಜೀವ ಅನ್ನುತ್ತಿದ್ದ ಮಾನಸ ಪುಟ್ಟಮರಿಯನ್ನ ಎತ್ತಿಕೊಂಡು ಎದೆಗವುಚಿಕೊಂಡಳು. ನಾಯಿಮರಿಗೆ ಹೋದ ಜೀವ ಬಂದಂತಾಯಿತು. ಮಾನಸಳಿಗೆ ಆ ನಾಯಿಯನ್ನು ಏನು ಮಾಡುವುದು ತಿಳಿಯದೇ ಮನೆಗೆ ತಂದುಬಿಟ್ಟಳು. ಮನೆಯಲ್ಲಿ ಅಪ್ಪನಿಗೋ ನಾಯಿ ಮರಿಯನ್ನು ಕಂಡರಾಗದವರು ಸಾರ್ಥಕತೆಯ ಭಾವ ತೋರಿಸಿ ಮನೆ ಸದಸ್ಯನಾಗಿ ಸ್ವೀಕರಿಸುವುದಕ್ಕೆ ಅಪ್ಪನಿಗೆ ಮೊಬೈಲ್‌ನಲ್ಲಿ ಮೆಸೇಜ್ ಹೋಯಿತು. ಅಪ್ಪನ ಸಿಟ್ಟಿನ ನಡುವೆಯೂ ಹಾಲು ಕುಡಿದ ಕಾರಣ ಆ ದಿನದಿಂದ ನಾಯಿಮರಿ ಮನೆಯ ಸದಸ್ಯನಾಯಿತು. ವರ್ಷಗಳು ದಾಟಿ ಮಾನಸ ಉನ್ನತ ಶಿಕ್ಷಣಕ್ಕಾಗಿ ಊರು ಬಿಟ್ಟರೂ ನಾಯಿ ಮನೆಯವರನ್ನ ಬಿಡದೆ ಬೆಂಗಾವಲಾಗಿ ಜೊತೆ ನಿಂತಿತು. ಈಗಲೂ ಜೋರು ಮಳೆ ಬಂದಾಗ ನಾಯಿ ಮನೆ ಒಳಗೆ ಹೋಗಿ ಕಿಟಕಿಯಿಂದ ಮಳೆಯನ್ನೇ ನೋಡುತ್ತಾ ತನ್ನ ಬದುಕಿನ ಎಲ್ಲ ಕ್ಷಣಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದೆ. ತನ್ನನ್ನು ಉಳಿಸಿದಕ್ಕೆ ಮನೆಯವರ ಮುಖವನ್ನು ನೋಡಿ ನಗುತ್ತಿದೆ.

**– ಧೀರಜ್** ಬೆಳ್ಳಾರೆ

# ಇಂದು ಜನಸ್ಪಂದನ, ಕುಂದುಕೊರತೆ ಸಭೆ

• ಪ್ರಜೋದಯ ವರದಿ

ಹಾಸನ: ತಾಲ್ಲೂಕು ವ್ಯಾಪ್ತಿಯ ಎಲ್ಲಾ ರೈತಾಪಿ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಸಾಮಾಜಿಕ ಶೈಕ್ಷಣಿಕ ಹಾಗೂ ಕೃಷಿ ಚಟುವಟಿಕೆಗಳಿಗೆ ವಿವಿಧ ಇಲಾಖೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳು ನಿಗದಿತ ಅವಧಿಯೊಳಗೆ ದೊರೆಯದೇ ಇದ್ದಾಗ, ಅಹವಾಲನ್ನು ಸ್ವೀಕರಿಸಲು ಸರ್ಕಾರ ಏಕೀಕೃತ ಸಾರ್ವಜನಿಕ ದೂರು ಅನುಷ್ಠಾನ ಗೊಳಿಸಿದೆ.

ಸಾರ್ವಜನಿಕರು ತಮ್ಮ ಅಹವಾಲನ್ನು ಸಲ್ಲಿಸಲು ಎಲ್ಲಾ ತಾಲ್ಲೂಕು ಮಟ್ಟದ ನಿವಾರಣಾ ತಂತ್ರಾಂಶದಲ್ಲಿ ವ್ಯವಸ್ಥೆಯನ್ನು ಅಧಿಕಾರಿಗಳು ಒಂದೆಡೆ ಇರುವುದರಿಂದ ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿ ತಮ್ಮ ಅಹವಾಲನ್ನು ದಾಖಲಿಸಲು ಹಾಸನ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದುದ್ದ ಹೋಬಳಿ, ದುದ್ದ ಗ್ರಾಮದಲ್ಲಿ ಜು.18 ರಂದು ಬೆಳಿಗ್ಗೆ 10 ಗಂಟೆಗೆ ದುದ್ದ ಆರ್.ಎಸ್. ಸರ್ಕಾರಿ ಪ್ರೌಢಶಾಲೆ ಆಟದ ಮೈದಾನದಲ್ಲಿ ಜನಸ್ಪಂದನ/ ಕುಂದು- ಕೊರತೆ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸುವಂತೆ ಹಾಸನ ತಾಲ್ಲೂಕು ತಹಸೀಲ್ದಾರ್ ಅವರು ತಿಳಿಸಿದ್ದಾರೆ.

# ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ದಿನ ವಿಸ್ತರಣೆ

• ಪ್ರಜೋದಯ ವರದಿ

**ಹಾಸನ:** ಭಾರತ ಚುನಾವಣಾ ಆಯೋಗವು 2026ರ ಅ.1 ಅನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗಾಗಿ ಪರಿಷ್ಕೃತ ವೇಳಾಪಟ್ಟಿಯನ್ನು ಹೊರಡಿಸಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಪರಿಷ್ಕರಣಾ ವೇಳಾಪಟ್ಟಿ ವಿವರ: ಮತಗಟ್ಟೆ ಅಧಿಕಾರಿಗಳಿಂದ ಮನೆ-ಮನೆ ಭೇಟಿಯನ್ನು ಆಗಸ್ಟ್ 8ರ ವರೆಗೆ, ಮತಗಟ್ಟೆಗಳ ಪುನರ್ ವಿಂಗಡಣೆ ಕಾರ್ಯ ಆಗಸ್ಟ್ 8, ಕರಡು ಮತದಾರರ ಪಟ್ಟಿ ಪ್ರಕಟಣೆ ಆಗಸ್ಟ್ 17, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿ ಆಗಸ್ಟ್ 17 ರಿಂದ ಸೆಪ್ಟೆಂಬರ್ 16 ರ ವರೆಗೆ, ಸೂಚನೆ ಹಂತ/ ಹಕ್ಕು ಮತ್ತು ಆಕ್ಷೇಪಣೆಗಳ ತಿರುವಳಿ ಆಗಸ್ಟ್ 17 ರಿಂದ ಅಕ್ಟೋಬರ್ 15 ರವರೆಗೆ, ಮತದಾರರ ಪಟ್ಟಿ ಪ್ರಕಟಣೆ ಅಕ್ಟೋಬರ್ 19 ರಂದು ಅಂತಿಮ ದಿನವಾಗಿದೆ.

ಪರಿಷ್ಕೃತ ವೇಳಾಪಟ್ಟಿಯಂತೆ ಹಾಗೂ ಭಾರತ ಚುನಾವಣಾ ಆಯೋಗದ ನಿರ್ದೇಶನಗಳಂತೆ ವಿಶೇಷ ಸಮಗ್ರ ಪರಿಷ್ಕರಣೆ- 2026 ಕಾರ್ಯ ಚಟುವಟಿಕೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

# ವಕೀಲ ವೃತ್ತಿ ತರಬೇತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ




**ಹಾಸನ:** ಜಿಲ್ಲೆಗೆ ಸೇರಿದ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್ ಬೌದ್ಧ ಮತ್ತು ಪಾರ್ಸಿ ಸಮುದಾಯದ ಅಭ್ಯರ್ಥಿಗಳಿಗೆ 2026-27ನೇ ಸಾಲಿನ ಕಾನೂನು ಪದವೀಧರರಿಗೆ ವಕೀಲ ವೃತ್ತಿಯಲ್ಲಿ ಮತ್ತು ನ್ಯಾಯಾಂಗ ಸೇವೆಯ ಪೂರ್ವ ತರಬೇತಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ಕಾನೂನು ಪದವಿ ಪಾಸು ಮಾಡಿದ ಮತೀಯ ಅಲ್ಪಸಂಖ್ಯಾತರರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್. ಬೌದ್ಧ ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿದ ಅಭ್ಯರ್ಥಿಯಾಗಿರಬೇಕು, ಪ್ರಸಕ್ತ ಸಾಲಿನಲ್ಲಿ ತರಬೇತಿ ಭತ್ಯೆಗೆ ಜಿಲ್ಲೆಯಿಂದ 3 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು, ಅಭ್ಯರ್ಥಿಗಳ ಪೋಷಕರ ವಾರ್ಷಿಕ ವರಮಾನ 3.50.000 ಲಕ್ಷ ರೂ. ಗಳಿಗಿಂತ ಕಡಿಮೆ ಇರಬೇಕು.

ತರಬೇತಿಯ ಅವಧಿ 4 ವರ್ಷಗಳು ಮಾತ್ರ, ತರಬೇತಿಯ ಅವಧಿಯಲ್ಲಿ ಮಾಹೆಯಾನ ರೂ 5000 ತರಬೇತಿ ಭತ್ಯೆ ನೀಡಲಾಗುವುದು. ಅರ್ಜಿಗಳನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ. ಆಕಾಶವಾಣಿ ಹಿಂಭಾಗ, ಸಾಲಗಾಮೆ ಮುಖ್ಯ ರಸ್ತೆ ಇಲ್ಲಿ ಪಡೆದು ಭರ್ತಿ ಮಾಡಿ ಜು.30ರ ಒಳಗೆ ಕಚೇರಿ ವೇಳೆಯಲ್ಲಿ ಸಲ್ಲಿಸುವುದು, ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

# ಉದ್ಯಮ ಸ್ಥಾಪಿಸಲು ಅರ್ಜಿ ಆಹ್ವಾನ

ಹಾಸನ: ಪದವಿ ಪಡೆದ ಪರಿಶಿಷ್ಟ ಜಾತಿ ನಿರುದ್ಯೋಗಿ ಯುವಕ/ಯುವತಿಯರು ಎಲೆಕ್ಟ್ರಾನಿಕ್ ಹಾಗೂ ಡಿಜಿಟಲ್ ಮಾಧ್ಯಮದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉದ್ಯಮ ಸ್ಥಾಪಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್‌ಪೀರ್ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಜು.31 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು ಆಯಾ ತಾಲ್ಲೂಕಿನ ಸಂಬಂದಪಟ್ಟ ಸಹಾಯಕ ನಿರ್ದೇಶಕರು ಅಥವಾ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸಲ್ಲಿಸಬಹುದಾಗಿದೆ.

# ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಕಲೇಶಪುರ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಾದ ಬಾಗೆ ಎಸ್ಟೇಟ್ ಹಾಗೂ ಜೆ ಟಿ ಪಿಂಟೋ ಎಸ್ಟೇಟ್ ಲಕ್ಕುಂದ ಇಲ್ಲಿ ಅಂಗನವಾಡಿ ಕಂ.ಕ್ರ್ ತಲಾ 2 ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಕಲೇಶಪುರ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.5500 ಹಾಗೂ ಸಹಾಯಕಿಯರಿಗೆ ಮಾಸಿಕ ಗೌರವಧನ ರೂ. 3000 ಆಗಿರುತ್ತದೆ, ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಆ.15 ರಂದು ಕೊನೆಯ ದಿನವಾಗಿರುತ್ತದೆ. ಸದರಿ ಅಂಗನವಾಡಿ ಸರ್ವೆ ವ್ಯಾಪ್ತಿಯ 18 ರಿಂದ 35 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅಂಗನವಾಡಿ ಕಂ.ಕ್ರ್‌ನ ಕಾರ್ಯಕರ್ತೆ ಹುದ್ದೆಗೆ ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುವುದು, ಸಹಾಯಕಿ ಹುದ್ದೆಗೆ ಕರ್ನಾಟಕ ರಾಜ್ಯದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ 7ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುವುದು. ಮಾಹಿತಿಗಾಗಿ ಸಕಲೇಶಪುರ ಶಿಶು ಅಭಿವೃದ್ಧಿ ಯೋಜನಾ ಕಚೇರಿ ದೂ. ಸಂಖ್ಯೆ: 08173- 244557 ಸಂಪರ್ಕಿಸಬಹುದೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

# ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳ ಎಲ್ಲರಿಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ವತಿಯಿಂದ ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ ಏರ್ಪಡಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕ ಡಾ.ಬಿ.ಕೆ.ರಮೇಶ್ ಅವರು ತಿಳಿಸಿದ್ದಾರೆ.

ರೈತರಿಗೆ ಜು.22 ಮತ್ತು ಜು.23 ರಂದು ಆಧುನಿಕ ಕುರಿ ಮತ್ತು ಮೇಕೆ ಸಾಕಣಿಕೆ ತರಬೇತಿ, ಜು.28 ಮತ್ತು ಜು.29 ರಂದು ಆಧುನಿಕ ಕೋಳಿ ಸಾಕಾಣಿಕೆ ತರಬೇತಿ ನೀಡಲಾಗುವುದು.

ತರಬೇತಿಯಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಅಥವಾ ಸ್ಟೈಫಂಡ್ ನೀಡಲಾಗುವುದಿಲ್ಲ, ಆಸಕ್ತಿಯುಳ್ಳವರು ಆಧಾರ್ ಕಾರ್ಡ್, ಪರಿಶಿಷ್ಟ ಜಾತಿ/ ಪಂಗಡಕ್ಕೆ ಸೇರಿದವರು ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರದೊಂದಿಗೆ ತರಬೇತಿ ಪ್ರಾರಂಭವಾಗುವ ದಿನ ಬೆಳಿಗ್ಗೆ 10.30 ಗಂಟೆಯೊಳಗೆ ಉಪ ನಿರ್ದೇಶಕರ ಕಚೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ, ಬಿ.ಎಂ ರಸ್ತೆ ಸಂತೇಪೇಟೆ, ಇಲ್ಲಿ ಹಾಜರಾಗಬೇಕು ಹಾಗೂ ಮಾಹಿತಿಗಾಗಿ ದೂ. ಸಂ: 08172 -235226 ಗೆ ಸಂಪರ್ಕಿಸಬಹುದಾಗಿದೆ.

# ಜೋಳಕ್ಕೆ ಬಿಳಿ ಸುಳಿ ರೋಗ: ನೆರವಿಗೆ ಧಾವಿಸಿ

## ರಾಜ್ಯ ಸರ್ಕಾರಕ್ಕೆ ಶಾಸಕ ಹೆಚ್.ಕೆ.ಸುರೇಶ್ ಒತ್ತಾಯ

• ಪ್ರಜೋದಯ ವರದಿ



**ಬೇಲೂರು:** ಜೋಳದ ಬೆಳೆಗೆ ಬಿಳಿ ಸುಳಿ ರೋಗದ ಬರೆ ಬಿದ್ದಿದ್ದು, ಕೂಡಲೇ ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಆಗ್ರಹಪಡಿಸಿದರು.

ತಾಲ್ಲೂಕಿನ ಹಳೇಬೀಡು ಹೋಬಳಿ ವ್ಯಾಪ್ತಿಯಲ್ಲಿ ಜೋಳದ ಬೆಳೆಗೆ ಮಾರಕವಾಗಿರುವ 'ಬಿಳಿ ಸುಳಿ ರೋಗ' ತಗುಲಿದ್ದು, ರೈತರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಹಾನಿಗೊಳಗಾದ ಜಮೀನುಗಳಿಗೆ ಶಾಸಕ ಹೆಚ್.ಕೆ. ಸುರೇಶ್ ಅವರು ಖುದ್ದಾಗಿ ಭೇಟಿ ನೀಡಿ, ಬೆಳೆ ವೀಕ್ಷಣೆ ನಡೆಸಿ ರೈತರಿಗೆ ಧೈರ್ಯ ತುಂಬಿದರು. ಬಳಿಕ ಮಾಧ್ಯಮ ಗಳೊಂದಿಗೆ ಮಾತನಾಡಿದ ಅವರು ಕ್ಷೇತ್ರದ ರೈತರ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ತೀವ್ರ ಆತಂಕ ಹಾಗೂ ವಿಷಾದ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಈಗಾಗಲೇ ಭೀಕರ ಬರಗಾಲದ ಪರಿಸ್ಥಿತಿ ಇದೆ. ಇಂತಹ ಕಠಿಣ ಸನ್ನಿವೇಶದಲ್ಲೂ ರೈತರು ಲಭ್ಯವಿರುವ ಅಲ್ಪಸ್ವಲ್ಪ ನೀರಾವರಿ ಸೌಲಭ್ಯವನ್ನು ಬಳಸಿಕೊಂಡು ಜೋಳದ ಬೆಳೆಯನ್ನು ಸಾಕಿ ಬೆಳೆಸಿದ್ದರು. ಆದರೆ, ದುರದೃಷ್ಟವಶಾತ್ ಈಗ ಇಡೀ ಬೆಳೆಗೆ ಬಿಳಿ ಸುಳಿ ರೋಗ ಆವರಿಸಿದೆ ಎಂದು ಹೇಳಿದರು.

ಈ ರೋಗದ ತೀವ್ರತೆ ಎಷ್ಟಿದೆಯೆಂದರೆ, ಈ ಜೋಳದ ದಂಟನ್ನು ದನಕರುಗಳೂ ಸಹ ತಿನ್ನಲು ಸಾಧ್ಯವಾಗದಷ್ಟು ಸಂಪೂರ್ಣವಾಗಿ ಬೆಳೆ ಹಾಳಾಗಿದೆ. ಇತ್ತ ದನಕರುಗಳಿಗೂ ಬಳಕೆಯಾಗುತ್ತಿಲ್ಲ, ಅತ್ತ ಫಸಲೂ ಕೈಗೆ ಸಿಗುತ್ತಿಲ್ಲ. ಇದು ರೈತರ ಜೀವನವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದೆ ಎಂದು ಆತಂಕಿಸಿದರು.

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 10,000 ಹೆಕ್ಟೇರ್ ಪ್ರದೇಶದಲ್ಲಿ ಜೋಳದ ಬೆಳೆ ಈ ರೋಗದಿಂದಾಗಿ ನಾಶವಾಗಿದೆ ಎಂದು ಅಂದಾಜಿಸಲಾಗಿದೆ. ಸರ್ಕಾರವು ಕೂಡಲೇ ಈ ವಿಷಯಕ್ಕೆ ಸ್ಪಂದಿಸಿ, ಬಾಧಿತ ಪ್ರದೇಶಗಳಿಗೆ ಕೃಷಿ ಅಧಿಕಾರಿಗಳನ್ನು ಕಳುಹಿಸಬೇಕು. ರೋಗ ತಗುಲಿರುವ ಜೋಳದ ಬೆಳೆ ಹಾನಿಯನ್ನು ಅಧಿಕಾರಿಗಳು ಸ್ಥಳದಲ್ಲೇ ಸಮಗ್ರವಾಗಿ ಪರಿಶೀಲಿಸಬೇಕು. ಮುಖ್ಯಮಂತ್ರಿಗಳು ತಕ್ಷಣವೇ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ಹಾನಿಗೊಳಗಾದ ರೈತರಿಗೆ ಸೂಕ್ತ ಆರ್ಥಿಕ ನೆರವು ಘೋಷಿಸಬೇಕು ಎಂದು ಒತ್ತಾಯಿಸಿದರು.

ಬೆಳೆ ಬೆಳೆದು ಜೀವನ ಮಾಡುವುದೊಂದೇ ರೈತರಿಗಿರುವ ದಾರಿ. ಆದ್ದರಿಂದ ರೈತರ ಹಿತದೃಷ್ಟಿಯಿಂದ ಸರ್ಕಾರ ತಕ್ಷಣವೇ ಪ್ರತಿ ಹೆಕ್ಟೇರ್‌ಗೆ 5 ಲಕ್ಷ ರೂಪಾಯಿ ಪರಿಹಾರವನ್ನು ಬಿಡುಗಡೆ ಮಾಡಬೇಕು ಎಂದು ಶಾಸಕರು ಸರ್ಕಾರದ ಗಮನ ಸೆಳೆದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಅಧಿಕಾರಿ ಕಾಂತರಾಜು, ರೈತ ಮುಖಂಡರು ಹಾಗೂ ಹಳೇಬೀಡು ಹೋಬಳಿ ಕೃಷಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಶ್ರೀ ಚೌಡೇಶ್ವರಿ ದೇವಿಗೆ ಆಷಾಢ ಪೂಜೆ ಸಂಭ್ರಮ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ದೇವಾಂಗ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇಗುಲದಲ್ಲಿ ಆಷಾಢ ಮಾಸದ ಮೊದಲ ಶುಕ್ರವಾರದ ವಿಶೇಷ ಪೂಜೆಯನ್ನು ಶ್ರದ್ಧಾ- ಭಕ್ತಿಯಿಂದ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ಆಷಾಢ ಮಾಸದ ಮೊದಲ ಶುಕ್ರವಾರದ ಅಂಗವಾಗಿ ದೇವಿಗೆ ನಿಂಬೆಹಣ್ಣು, ಪುಷ್ಪಗಳು ಹಾಗೂ ವಿವಿಧ ಹಣ್ಣುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಿಗ್ಗೆಯಿಂದಲೇ ಭಕ್ತರು ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆದರು. ಮಹಿಳೆಯರು ಬಾಗಿನ ಅರ್ಪಿಸಿ, ಮಂಗಳಾರತಿ ಬೆಳಗಿ ಕುಟುಂಬದ ಸುಖ-ಶಾಂತಿ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಅಲ್ಲದೆ ಈ ಬಾರಿ ರಾಜ್ಯದಲ್ಲಿ ಮಳೆ ಕಡಿಮೆಯಾಗಿದ್ದು, ದೇವಿಯ ಮಹಿಮೆಯಿಂದ ಉತ್ತಮ ಮಳೆ, ಬೆಳೆಯಾಗಲಿ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ದೇಗುಲದ ಗೌರವ ಅಧ್ಯಕ್ಷ ಗಿರಿಯಪ್ಪ ಶೆಟ್ಟಿ ಅವರು, ಚೌಡೇಶ್ವರಿ ಮಹಿಳಾ ಭಜನಾ ಮಂಡಳಿಯ ಪದಾಧಿಕಾರಿಗಳು, ಪ್ರತಿ ವರ್ಷ ಆಷಾಢ ಮಾಸದ ವಿಶೇಷ ಪೂಜೆಯನ್ನು ಮಂಡಳಿಯ ವತಿಯಿಂದ ಶ್ರದ್ಧಾ-ಭಕ್ತಿಯಿಂದ ನಡೆಸಿಕೊಂಡು ಬರಲಾಗುತ್ತಿದೆ. ಭಕ್ತರ ಸಹಕಾರದಿಂದ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ಪೂಜೆಯ ಬಳಿಕ ಭಕ್ತರಿಗೆ ತೀರ್ಥ ಪ್ರಸಾದ ವಿತರಿಸಲಾಯಿತು. ದೇವಾಲಯದಲ್ಲಿ ದಿನವಿಡೀ ಭಕ್ತರ ದಟ್ಟಣೆ ಕಂಡು ಬಂದಿದ್ದು, ಪೂಜಾ ಕಾರ್ಯಕ್ರಮ ಭಕ್ತಿಭಾವದಿಂದ ಅದ್ದೂರಿಯಾಗಿ ನೆರವೇರಿತು.

ಪೂಜಾ ಕಾರ್ಯಕ್ರಮದಲ್ಲಿ ಚೌಡೇಶ್ವರಿ ಮಹಿಳಾ ಭಜನಾ ಮಂಡಳಿಯ ಪದಾಧಿಕಾರಿಗಳು, ದೇಗುಲದ ಆಡಳಿತ ಮಂಡಳಿಯ ಸದಸ್ಯರು, ದೇವಾಂಗ ಸಮಾಜದ ಮುಖಂಡರು ಹಾಗೂ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು. ಪೂಜೆಯ ಬಳಿಕ ದೇವಿಗೆ ಮಹಾಮಂಗಳಾರತಿ ನೆರವೇರಿಸಿ, ದೇವಾಲಯಕ್ಕೆ ಆಗಮಿಸಿದ್ದ ಎಲ್ಲ ಭಕ್ತರಿಗೆ ತೀರ್ಥ, ಪ್ರಸಾದ ವಿತರಿಸಲಾಯಿತು.

# ಎನ್.ಎಂ.ಎಂ.ಎಸ್. ವಿದ್ಯಾರ್ಥಿ ವೇತನಕ್ಕೆ ಆಯ್ಕೆ: ಪೋಷಕರ ಸಭೆ

## ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ, ವಿತರಣೆ, ಸನ್ಮಾನ

• ಪ್ರಜೋದಯ ವರದಿ



**ಬೇಲೂರು:** ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆ, ಗಬ್ಬಲಗೋಡು ಶಾಲೆಯಲ್ಲಿ ಪೋಷಕರ ಸಭೆ ಹಾಗೂ 2025-26ನೇ ಸಾಲಿನ ಎನ್.ಎಂ.ಎಂ. ಎಸ್. ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿ ಗಳಿಗೆ ಸನ್ಮಾನ ಮತ್ತು ಪೋಷಕರ ಸಭೆಯನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಬೇಲೂರು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದು ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಪ್ರತೀಕ್ಷಾ, ತೃತೀಯ ಸ್ಥಾನ ಪಡೆದು ಆಯ್ಕೆಯಾದ ಸಿ.ಆರ್. ಚೇತನ್ ಹಾಗೂ ಉಲ್ಲಾಸ್ ಅವರನ್ನು ಶಾಲೆಯ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು. ಇದೇ ವೇಳೆ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿಗಳು ತಮ್ಮ ಅನುಭವಗಳು ಹಾಗೂ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ವರ್ಷ ತಾವು ಸಾಧಿಸಿದ ರೀತಿಯಲ್ಲಿಯೇ ಮುಂದಿನ ವರ್ಷವೂ ಎಂಟನೇ ತರಗತಿಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಎನ್ ಎಂ ಎಂ ಎಸ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎನ್‌ಎಂಎಂಎಸ್ ನೋಡಲ್ ಶಿಕ್ಷಕ ಎಚ್ .ಪಿ.ಗಿರೀಶ್ ಅವರು ಮಾತನಾಡಿ, ವಿದ್ಯಾರ್ಥಿಗಳ ಈ ಸಾಧನೆ ಶಾಲೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ನಿರಂತರ ಅಭ್ಯಾಸ ಮಾಡಿದರೆ ಯಾವುದೇ ಸಾಧನೆಯೂ ಅಸಾಧ್ಯವಲ್ಲ ಎಂದು ಹೇಳಿದರಲ್ಲದೆ, ಎನ್‌ಎಂಎಂಎಸ್ ತರಬೇತಿ ನೀಡುವ ಸಂದರ್ಭದಲ್ಲಿ ತಮ್ಮೊಂದಿಗೆ ಹಾಗೂ ಶಾಲೆಯ ಶಿಕ್ಷಕರೊಂದಿಗೆ ಕೈಜೋಡಿಸಿದ ಸ್ನೇಹಿತರನ್ನು ಸ್ಮರಿಸಿದರು. ಉಪನ್ಯಾಸಕರಾದ ಹರೀಶ್, ಶಿಕ್ಷಕರಾದ ಈಶ್ವರ್, ಬಿ.ಎಲ್. ಕಾವ್ಯಶ್ರೀ ಮತ್ತು ನವೀನ್‌ಕುಮಾರ್‌ಗೆ ಕೃತಜ್ಞತೆ ಸಲ್ಲಿಸಿದರು. ಇದಲ್ಲದೇ ಮಕ್ಕಳಿಗೆ ಎನ್‌ಎಂಎಂಎಸ್ ಸಂಬಂಧಿಸಿದಂತೆ ಇನ್ನಿತರ ವಿವಿಧ ಕಲಿಕಾ ಮಾರ್ಗಗಳನ್ನೂ ಸಹ ಅನುಸರಿಸಿದ್ದು ಮಕ್ಕಳಿಗೆ ನೆರವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರಾದ ಅಂಬಿಕಾ ಅವರು ಮಾತನಾಡಿ, ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪೋಷಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಅವರ ಪ್ರತಿಭೆಯನ್ನು ಗುರುತಿಸಿ ನಿರಂತರ ಪ್ರೋತ್ಸಾಹ ನೀಡುವಂತೆ ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಹಾಲಪ್ಪ ಅವರು ವಹಿಸಿದ್ದು ಸಭೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಸಾಧಕ ವಿದ್ಯಾರ್ಥಿಗಳ ಪೋಷಕರಾದ ನಿಂಗರಾಜು, ಲತಾ, ಭಾರತಿ, ಹಾಗೂ ಗೀತಾಮಣಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಮಕ್ಕಳ ಸಾಧನೆಗೆ ಸಂತಸ ಹಾಗೂ ಹೆಮ್ಮೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಜಯಮ್ಮ, ಗೀತಾ, ಶಾಂತಿ ಪಿಂಟೋ, ರಕ್ಷಿತ, ನಟರಾಜ್, ಎಸ್‌ಡಿಎಂಸಿ ಸದಸ್ಯರು, ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನೇಮಕ



ಸಕಲೇಶಪುರ: ತಾಲ್ಲೂಕು ಆರೋಗ್ಯಾಧಿಕಾರಿಯಾಗಿ ಡಾ|| ಕಿಶೋರ್ ಕುಮಾರ್ ಅವರನ್ನು ಸರ್ಕಾರ ನೇಮಕ ಮಾಡಿದೆ.

ಈವರೆಗೆ ತಾಲ್ಲೂಕು ಆರೋಗ್ಯಾಧಿಕಾರಿಯಾಗಿ ಡಾ|| ಮಹೇಶ್ ಅವರು ಸುಮಾರು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ದೀರ್ಘಾವಧಿಯಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಿನ್ನೆಲೆಯಲ್ಲಿ ಅವರ ವರ್ಗಾವಣೆಗೆ ಸಾರ್ವಜನಿಕರಿಂದ ವ್ಯಾಪಕ ಒತ್ತಾಯ ಕೇಳಿ ಬಂದಿತ್ತು.

ಇತ್ತೀಚೆಗೆ ಆರೋಗ್ಯ ಸಚಿವರು ಆಸ್ಪತ್ರೆಯಲ್ಲಿನ ಸಮಸ್ಯೆಗಳು, ವೈದ್ಯರ ಕೊರತೆ ಹಾಗೂ ಆರೋಗ್ಯ ಸೇವೆಗಳ ಕುರಿತು ಸಮಗ್ರ ಮಾಹಿತಿ ಪಡೆದಿದ್ದರು. ಈ ಹಿನ್ನೆಲೆಯಲ್ಲಿ ತಾಲೂಕು ಆರೋಗ್ಯಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

# ಸೇವಾ ಸಮಿತಿಗೆ ಚರಣ್ ನೂತನ ಅಧ್ಯಕ್ಷ



• ಪ್ರಜೋದಯ ವರದಿ

**ಹಾರನಹಳ್ಳಿ:** ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಬನಶಂಕರಿ ದೇವಾಲಯದ ಸೇವಾ ಸಮಿತಿಗೆ ನೂತನವಾಗಿ ಸಮಿತಿ ರಚನೆ ಮಾಡಿದ್ದು, ವೈ.ಡಿ.ಚರಣ್ ಅವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಪುಟ್ಟಸ್ವಾಮಿ, ಖಜಾಂಚಿಯಾಗಿ ಗುರುಮೂರ್ತಿ ಹಾಗೂ ಕಾರ್ಯದರ್ಶಿಯಾಗಿ ಸುನಿಲ್ ಮಾದೇವರಹಳ್ಳಿ ಅವರನ್ನು ಹಾರನಹಳ್ಳಿ ಸಮಸ್ತ ದೇವಾಂಗ ಸಮಾಜ ಬಂದುಗಳು ಆಯ್ಕೆ ಮಾಡಿ ಶುಭಾಶಯ ಕೋರಿದರು.

ದೇವರಾಜ್ ಅವರು ಮಾತನಾಡಿ, ಬನಶಂಕರ ದೇವಿ ಅನುಗ್ರಹದಿಂದ ಹಿರಿಯರ ಹಾಗೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮಾಜ ಮುಖಿ ಕೆಲಸ ಮಾಡುವಂತೆ ನೂತನ ಸದಸ್ಯರಿಗೆಗೆ ಕಿವಿಮಾತು ಹೇಳಿದರು.

ಷಾಢ ಶುಕ್ರವಾರ ಪ್ರಯುಕ್ತ ಶ್ರೀ ಬನಶಂಕರಿ ಅಮ್ಮನವರಿಗೆ ವಿಶೇಷ ಅಭಿಷೇಕ ಪುಣ್ಯಾಹಃ ಮಹಾಪೂಜೆ ನಡೆಯಿತು.

ಈ ಸಂದರ್ಭದಲ್ಲಿ ಬೈರ ಶೆಟ್ರು, ಚನ್ನಾಪುರ ಶಂಕ್ರಣ್ಣ, ದೊಡ್ಡೇನಹಳ್ಳಿ ವಿರೂಪಾಕ್ಷಿ, ದೇವರಾಜು, ಬಸವರಾಜು, ಅಗುಂದ ಲೋಕೇಶ್, ಮಾಸ್ಟರ್, ದೇವಾಂಗದ ಸಮಾಜದ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು

# ಶ್ರೀಬನ್ನಿ ಮಹಾಕಾಳಿ ಅಮ್ಮನವರಿಗೆ ವಿಶೇಷ ಹೂವಿನ ಅಲಂಕಾರ



• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿಗೆ ಸಮೀಪದ ತಳಲೂರು ಗ್ರಾಮದ ಗ್ರಾಮ ದೇವತೆ ಅರಸೀಕೆರೆ ತಾಲ್ಲೂಕಿನ ಶಕ್ತಿ ದೇವತೆ ಶ್ರೀಬನ್ನಿ ಮಹಾಕಾಳಿ ಅಮ್ಮನವರಿಗೆ ಆಷಾಡ ಶುಕ್ರವಾರ ಅಂಗವಾಗಿ ಮಹಾ ಪೂಜೆ ನಡೆದ ನಂತರ ವಿಶೇಷ ಬಣ್ಣ ಬಣ್ಣ ಹೂವುಗಳಿಂದ ಅದ್ಭುತವಾಗಿ ಕಂಗೊಳಿಸುವಂತೆ ಅಲಂಕಾರ ಮಾಡಲಾಗಿತ್ತು. ದೇವಿಯ ದರ್ಶನಕ್ಕೆ ದೂರದ ಊರುಗಳಿಂದ ಭಕ್ತರುಗಳು ಆಗಮಿಸಿ ಕೃತಾರ್ಥರಾದರು.

# ಪಂಚಾಯಿತಿ ನಿರ್ಲಕ್ಷ್ಯ: 5ನೇ ದಿನಕ್ಕೆ ಅಹೋರಾತ್ರಿ ಧರಣಿ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೊಟವಾಳು ಗ್ರಾಮಸ್ಥರು ಹಕ್ಕುಪತ್ರವಿದ್ದರೂ ಖಾತೆ ಮಾಡಿಕೊಡದ ರಾಮನಾಥಪುರ ಗ್ರಾಮ ಪಂಚಾಯತಿ ನಿರ್ಲಕ್ಷ್ಯದ ವಿರುದ್ಧ ಪಂಚಾಯತಿ ಮುಂಭಾಗ ಉಪವಾಸ ಸತ್ಯಾಗ್ರಹ ಹಾಗೂ ಅಹೋರಾತ್ರಿ ಧರಣಿ ಐದನೇ ದಿನವೂ ಮುಂದುವರೆದಿದೆ.

ಈ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಡಾ.ಎಸ್.ರಾಘವೇಂದ್ರಗೌಡ ಮಾತನಾಡಿ, ಈಗಾಗಲೇ ಸತತ ಎರಡು ವರ್ಷ ಆದರೂ ಈವರೆಗೆ ಯಾವುದೇ ಅಧಿಕಾರಿಗಳು ಸರಿಯಾಗಿ ಸ್ಪಂದಿಸದಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸುಮಾರು 4-5 ವರ್ಷಗಳ ಹಿಂದೆ ರಾಜೀವ್‌ಗಾಂಧಿ ಆಶ್ರಯ ವಸತಿ ಯೋಜನೆಯಡಿ ಕೊಟವಾಳು ಗ್ರಾಮದ ವಸತಿ ರಹಿತರಿಗೆ ನಿವೇಶನ ಹಂಚಿಕೆ ಮಾಡಿ ಹಕ್ಕುಪತ್ರಗಳನ್ನು ವಿತರಿಸಲಾಗಿತ್ತು. ಆದರೆ ಹಕ್ಕುಪತ್ರ ವಿತರಣೆಯಾಗಿ 4-5 ವರ್ಷಗಳೇ ಕಳೆದರೂ ಸಂಬಂಧಪಟ್ಟ ಇಲಾಖೆಗಳು ಇದುವರೆಗೆ ಖಾತೆ ಮಾಡಿಕೊಟ್ಟಿಲ್ಲ. ಇದರಿಂದಾಗಿ ಫಲಾನುಭವಿಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದು, ಇಂದಿಗೂ ಬಾಡಿಗೆ ಮನೆಗಳಲ್ಲಿ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಲವಾರು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಕೇವಲ ಭರವಸೆ ನೀಡುತ್ತಿದ್ದಾರೆಯೇ ಹೊರತು ಕೆಲಸ ಮಾಡುತ್ತಿಲ್ಲ. ಮಳೆ, ಗಾಳಿ ಎನ್ನದೆ ಸಣ್ಣ ಮಕ್ಕಳೊಂದಿಗೆ ಮಹಿಳೆಯರು ಕಳೆದ 3 ದಿನಗಳಿಂದ ಹಗಲು ರಾತ್ರಿ ಬೀದಿಯಲ್ಲಿ ಕುಳಿತಿರುವುದು ತಾಲ್ಲೂಕಿನ ಆಡಳಿತದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಈ ಕೂಡಲೇ ಜಿಲ್ಲಾಧಿಕಾರಿಗಳು ಮತ್ತು ಸಂಬಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸಬೇಕು. ಬಡವರ ನೋವಿಗೆ ಸರ್ಕಾರ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟವನ್ನು ತೀವ್ರಗೊಳಿಸುವುದಾಗಿ ಧರಣಿ ನಿರತರು ಎಚ್ಚರಿಸಿದರು.

ಹೋರಾಟದಲ್ಲಿ ಆಶ್ರಯ ನಿವೇಶನ ಮಹಿಳೆಯರು, ಕುಟುಂಬಸ್ಥರು, ವಿವಿಧ ಸಂಘಟನೆಗಳು, ರೈತ ಸಂಘಗಳು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಸೀಬಳ್ಳಿ ಯೋಗಣ್ಣ, ಸುವರ್ಣ ಕರ್ನಾಟಕ ರಕ್ಷಣಾ ಸೇನೆಯ ಪದಾಧಿಕಾರಿಗಳಾದ ರಮೇಶ್, ಆನಂದ್, ಪ್ರಕಾಶ್, ಮಂಜೇಗೌಡ, ವಿಜಯಕುಮಾರ್, ಶಿವಕುಮಾರ್, ರಾಜು, ಯಾಸಿನ್, ರಾಮನಾಥಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಮುಖಂಡರುಗಳು ಹಾಗೂ ಸ್ಥಳೀಯ ಗ್ರಾಮಸ್ಥರುಗಳು ಭಾಗಿಯಾಗಿದ್ದರು.

## ಕಲೆಯ ಮೂಲಕವೇ ಇನ್ನೂ ಬದುಕಿರುವ ಗಾನ ಕೋಗಿಲೆ

# ಸಾವಿರಾರು ಗೀತೆಗಳೊಂದಿಗೆ ಎಸ್.ಜಾನಕಿ ಅಮರ

• ಪ್ರಜೋದಯ ವರದಿ



**ಅರಸೀಕೆರೆ:** ತಮ್ಮ ಸುಮಧುರ ಕಂಠದ ಮೂಲಕ ಕೋಟ್ಯಾಂತರ ಅಭಿಮಾನಿಗಳ ಮನಗೆದ್ದಿದ್ದ ಗಾನ ಕೋಗಿಲೆ ಎಸ್.ಜಾನಕಿ ಅವರು ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಅವರು ಹಾಡಿರುವ ಗೀತೆಗಳ ಮೂಲಕ ಅಮರರಾಗಿದ್ದಾರೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿ ನಾಕಲಗೂಡು ಹೇಳಿದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಾಗೂ ಕನ್ನಡ ಜಾನಪದ ಪರಿಷತ್ತು ತಾಲ್ಲೂಕು ಘಟಕ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಗಾನ ಕೋಗಿಲೆ ಎಸ್.ಜಾನಕಿ ಅವರ ನುಡಿನಮನ ಹಾಗೂ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಾವಿದನಿಗೆ ಸಾವಿದೆ, ಆದರೆ ಕಲೆಗೆ ಸಾವಿಲ್ಲ, ತನ್ನ ಕಲೆಯ ಮೂಲಕವೇ ಕಲಾವಿದ ಸತ್ತ ನಂತರವೂ ಬದುಕಿರುತ್ತಾನೆ, ಅಂತಹ ಮಹಾನ್ ಕಲಾವಿದೆಯಾಗಿದ್ದರು ಎಸ್.ಜಾನಕಿ ಎಂದು ವರ್ಣಿಸಿದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ತಾಲೂಕು ಅಧ್ಯಕ್ಷ ಕೆ.ಎಸ್.ಮಂಜುನಾಥ್ ಅವರು ಮಾತನಾಡಿ, ಜಾನಕಿ ಅವರದ್ದು ತೆಲುಗು ಮಾತೃ ಭಾಷೆ. ಆದರೂ ಕನ್ನಡ ಭಾಷೆ ಮತ್ತು ಭಾವದ ಬಗ್ಗೆ ಅವರಿಗಿದ್ದ ಅಗಾಧ ಪ್ರೇಮದಿಂದಾಗಿ ಅವರ ಕಂಠದಿಂದ ಸಾವಿರಾರು ಭಾವಗೀತೆ, ಭಕ್ತಿಗೀತೆ ಹಾಗೂ ಚಲನಚಿತ್ರ ಗೀತೆಗಳು ನಿರಾಳವಾಗಿ ಹರಿದು ಬಂದವು, ಅಂತಹ ಕಲಾವಿದೆ ನಮ್ಮನ್ನು ಅಗಲಿರುವುದು ಗಾಯನ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಬಿ,ಪರಮೇಶ್ ಅವರು ಮಾತನಾಡಿ, ಗಂಧರ್ವ ಲೋಕದಿಂದ ಬಂದ ಕೋಗಿಲೆ ಒಂದು ತನ್ನ ಸುಮಧುರ ಕಂಠದ ಮೂಲಕ ಭೂಮಂಡಲದಲ್ಲಿ ಗಾನಸುಧೆ ಹರಿಸಿ ಮತ್ತೆ ಗಂಧರ್ವ ಲೋಕಕ್ಕೆ ತೆರಳಿದರು ಭೂಲೋಕದ ತನ್ನ ಕೋಟ್ಯಾಂತರ ಅಭಿಮಾನಿಗಳ ಬಾಯಲ್ಲಿ ತಾವು ಹಾಡಿರುವ ಗೀತೆಗಳ ಮೂಲಕ ನಿತ್ಯ ನಲಿದಾಡುತ್ತಾರೆ ಜಾನಕಿ ಅವರು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ನ ಮಾಜಿ ಅಧ್ಯಕ್ಷ ಉದಯರವಿ, ನಗರದ ವೃತ್ತ ನಿರೀಕ್ಷಕ ಕೃಷ್ಣಕುಮಾರ್, ರೇವಣಸಿದ್ದಯ್ಯ, ಉಪನ್ಯಾಸಕಿ ಸುಧಾ ಕಲ್ಯಾಣ್ ಕುಮಾರ್, ಕೆ.ಸಿ.ನಟರಾಜ್ ಇನ್ನಿತರರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಎಸ್. ಜಾನಕಿ ಅವರು ಹಾಡಿರುವ ಗೀತೆಗಳನ್ನು ಗಾಯಕರಾದ ಮೋತಿಲಾಲ್, ನಾಯಕ್, ದಿಬ್ಬೂರು ಯೋಗಿಶ್, ಸೈಫುಲ್ಲಾ, ಕಾತ್ಯಾಯನಿ ತೇವರಿಮಠ್, ಪಾಜೀಲ್, ಅನಿತಾ ಮುಂತಾದವರು ಎಸ್.ಜಾನಕಿಯವರ ಹಾಡುಗಳನ್ನು ಹಾಡಿ ನುಡಿವಂದನೆ ಸಲ್ಲಿಸುವ ಮೂಲಕ ಗಮನ ಸೆಳೆದರು.

# ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಆಲೂರು:** 2026-27 ನೆ ಸಾಲಿನ ಆತ್ಮ ಯೋಜನೆಯಡಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ಆಧುನಿಕ ಯಂತ್ರೋಪಕರಣ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹಸಿರು ಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಇತ್ಯಾದಿ ಕೃಷಿ ಚಟುವಟಿಕೆಗಳಲ್ಲಿ ಸಾಧನೆ ಮಾಡಿದವರು ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ರೈತರು ಮತ್ತು ರೈತ ಮಹಿಳೆಯರು ಅರ್ಜಿಗಳನ್ನು ಹತ್ತಿರದ ಸಹಾಯಕ ಕೃಷಿ ನಿರ್ದೇಶಕರುಗಳ ಕಚೇರಿಗಳಿಂದ ಪಡೆದುಕೊಂಡು, ಜುಲೈ 31 ರೊಳಗೆ ಸಂಬಂಧಿತ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸುವುದು. ಈಗಾಗಲೇ ಪ್ರಶಸ್ತಿ ಪಡೆದ ರೈತರು ಪುನ: ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗೆ ರೈತ ಸಂಪರ್ಕ ಕೇಂದ್ರದ ಅಧಿಕಾರಿಯನ್ನು ಸಂಪರ್ಕಿಸಲು ತಾಲ್ಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಮನು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೃಹಜ್ಯೋತಿ ಯೋಜನೆ ಪರಿಶೀಲನಾ ಸಭೆ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರದ ಚೆಸ್ಕಾಂ ಕಛೇರಿಯಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್.ಪಿ.ಶ್ರೀಧರ್ ಗೌಡ ಅವರ ಅಧ್ಯಕ್ಷತೆಯಲ್ಲಿ ಗೃಹಜ್ಯೋತಿ ಯೋಜನೆಯ ಪರಿಷ್ಕರಣೆ ಮತ್ತು ಪ್ರಗತಿ ಪರಿಶೀಲನಾ ಸಭೆಯನ್ನು ಚೆಸ್ಕಾಂ ಅಧಿಕಾರಿಗಳು, ಗ್ಯಾರಂಟಿ ಸಮಿತಿ ಸದಸ್ಯರುಗಳು ಹಾಗೂ ಮಾಪಕ ಓದುಗರ ಸಮ್ಮುಖದಲ್ಲಿ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಶ್ರೀಧರ್ ಗೌಡ ಅವರು, ಕಾಂಗ್ರೆಸ್ ಸರ್ಕಾರ ನೀಡಿರುವ ಪಂಚ ಗ್ಯಾರಂಟಿಗಳಲ್ಲಿ ಮಹತ್ವಕಾಂಕ್ಷಿ ಯೋಜನೆಯಾದ ಗೃಹಜ್ಯೋತಿ ಯೋಜನೆಯು ಅದೆಷ್ಟೋ ಬಡ ಕುಟುಂಬಗಳಿಗೆ ಬೆಳಕು ನೀಡುತ್ತಿದೆ. ಮೀಟರ್ ರೀಡರ್‌ಗಳು ಪರಿಷ್ಕರಣೆ ಸಂದರ್ಭದಲ್ಲಿ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸುವಾಗ ಸಂಯಮದಿಂದ ನಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಗೃಹಜ್ಯೋತಿ ಯೋಜನೆಯನ್ನು ಪ್ರತಿ ಮನೆಗಳಿಗೂ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮುಖ್ಯ ಪಾತ್ರ ವಹಿಸಬೇಕು ಎಂದು ತಿಳಿಸಲಾಯಿತು.

ಸಭೆಯಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಸದಸ್ಯರಾದ ಸೋಮಶೇಖರ್ ಕೆ.ಟಿ., ಸಲೀಂ ಅಹಮದ್, ರಾಜೇಶ್, ಧರ್ಮ ಎ.ವಿ., ಸತ್ಯರಾಜ್, ಬಿದರೂರು ಕೃಷ್ಣ, ವಡ್ಡರಹಳ್ಳಿ ದೀಪು, ಅರಕಲಗೂಡು ಮತ್ತು ರಾಮನಾಥಪುರ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಲ್ಲೂಕಿನ ಎಲ್ಲಾ ಚೆಸ್ಕಾಂ ಕಿರಿಯ ಅಭಿಯಂತರರು ಮತ್ತು ಎಲ್ಲಾ ವಿಭಾಗದ ಚೆಸ್ಕಾಂ ಮೀಟರ್ ರೀಡರ್‌ಗಳು ಉಪಸ್ಥಿತರಿದ್ದರು.

CMYK CMYK CMYK CMYK

## ಜಿಲ್ಲೆಯ ವಿವಿಧೆಡೆ ಚದುರಿದ ಮಳೆ

• ಪ್ರಜೋದಯ ವರದಿ



**ಹಾಸನ:** ಕಳೆದೊಂದು ವಾರದಿಂದ ಕಣ್ಮರೆಯಾಗಿದ್ದ ಮಳೆ ಶುಕ್ರವಾರದಿಂದ ಮತ್ತೆ ಜಿಲ್ಲೆಯ ವಿವಿಧೆಡೆಯಲ್ಲಿ ಚದುರಿದಂತೆ ಸುರಿಯಲು ಪ್ರಾರಂಭವಾಗಿದೆ.

ನಗರದಲ್ಲಿ ಮುಂಜಾನೆಯೇ ಸಾಧಾರಣ ಮಳೆಯಾಗಿದ್ದು, ಸಂಜೆ ವೇಳೆಗೆ ಅಲ್ಲಲ್ಲಿ ತುಂತುರು ಮಳೆಯಾಗಿದೆ. ದಿನವೀಡಿ ಮೋಡಕವಿದ ವಾತಾವರಣವಿದ್ದು ಮಳೆ ಸುರಿಯುವ ನಿರೀಕ್ಷೆ ವ್ಯಕ್ತವಾಗಿದೆ. ಜುಲೈ ಮೊದಲ ವಾರದಲ್ಲಿ ಅಬ್ಬರಿಸಿದ್ದ ಮಳೆ ಜು.10ರ ನಂತರ ಮಾಯವಾಗಿತ್ತು. ಇದೀಗ ನಗರ ಸೇರಿ ಜಿಲ್ಲೆಯ ವಿವಿಧೆಡೆ ಬಿಟ್ಟು ಬಿಟ್ಟು ಸುರಿಯಲಾರಂಭಿಸಿದೆ. ಕಳೆದ ಒಂದು ವಾರದಿಂದ ಸಂಪೂರ್ಣ ಬಿಸಿಲಿನಿಂದ ಕೂಡಿದ್ದ ವಾತಾವರಣ, ಮುಂಜಾನೆಯಿಂದ ಶೀತ ವಾತವರಣ ಕಂಡು ಬಂದಿದೆ.

ಸಕಲೇಶಪುರ ತಾಲ್ಲೂಕಿನಾದ್ಯಂತ ಗುರುವಾರ ರಾತ್ರಿಯಿಂದಲೇ ಸಾಧಾರಣವಾಗಿ ಮಳೆ ಸುರಿಯಲು ಪ್ರಾರಂಭವಾಗಿದೆ. ಸಣ್ಣ ಪ್ರಮಾಣದಲ್ಲಿ ಮಳೆ ಸುರಿಯುತ್ತಲೇ ಇರುವುದರಿಂದ ತಾಲ್ಲೂಕಿನಚಿಕ್ಕಂದೂರು ಗ್ರಾಮದ ಸಮೀಪದ ರಸ್ತೆ ಬದಿ ಮಣ್ಣು ಕುಸಿಯಲು ಪ್ರಾರಂಭವಾಗಿದೆ.

ಚಿಕ್ಕಂದೂರು-ಶನಿವಾರಸಂತೆ, ಕೂಡರಸ್ತೆ, ಕೆರೋಡಿ ಸಂಪರ್ಕ ಕಲ್ಪಿಸುವ ರಸ್ತೆಯ ಒಂದು ಭಾಗದ ಮಣ್ಣು ಕುಸಿದಿದ್ದು, ರಸ್ತೆಗೆ ಜಾರಿದೆ. ಮುಂದೆ ಇದು ಮರುಕಳುಹಿಸದಂತೆ ಸಂಬಂಧ ಪಟ್ಟವರು ತುರ್ತು ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

2,922 ಅಡಿಗಳಷ್ಟು (37.103 ಟಿಎಂಸಿ) ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿರುವ ಹೇಮಾವತಿ ಅಣೆಕಟ್ಟೆಯಲ್ಲಿ ಪ್ರಸ್ತುತ 2903.91 ಅಡಿ (22.314 ಟಿಎಂಸಿ) ಯಷ್ಟು ನೀರಿನ ಸಂಗ್ರಹವಿದೆ. 350 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. 1,513 ಕ್ಯೂಸೆಕ್ ಒಳಹರಿಸುವ ಬರುತ್ತಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 31 ಟಿಎಂಸಿಯಷ್ಟು ನೀರು ಸಂಗ್ರಹವಾಗಿತ್ತು.

# ದೇಣಿಗೆ ದುರುಪಯೋಗ: ಸುಪ್ರೀಂಗೆ ಶೀಘ್ರ ಮಧ್ಯಂತರ ವರದಿ

## ಜು.22ಕ್ಕೆ ರಾಮ ಜನ್ಮಭೂಮಿ ಟ್ರಸ್ಟ್ ಸಭೆ | ಸಿಬಿಐ ತನಿಖೆಗೆ ಹೆಚ್ಚಿದ ಆಗ್ರಹ

• ಪ್ರಜೋದಯ ವರದಿ

**ಲಖನೌ:** ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ದೇಣಿಗೆ ದುರುಪಯೋಗ ಪ್ರಕರ ಣದ ತನಿಖೆಗಾಗಿ ರಚಿಸಲಾದ ವಿಶೇಷ ತನಿಖಾ ತಂಡವು (ಎಸ್ಐಟಿ) ಸೋಮವಾರ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ವರದಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ದೇಣಿಗೆಯ ದುರುಪಯೋಗ, ಹಣ ಅಕ್ರಮ ವಹಿವಾಟು ಸೇರಿ ತನಿಖೆಯನ್ನು ಅಂತಿಮ ಗೊಳಿಸಲು ಎಸ್ಐಟಿ ಉತ್ತರ ಪ್ರದೇಶ ಸರ್ಕಾರದ ಬಳಿ ಇನ್ನಷ್ಟು ಸಮಯ ಕೋರುವ ನಿರೀಕ್ಷೆ ಇದೆ. ಲಖನೌ ವಿಭಾಗೀಯ ಆಯುಕ್ತ ವಿಜಯ್ ವಿಶ್ವಾಸ್ ಪಂತ್ ನೇತೃತ್ವದ ಮೂವರು ಸದಸ್ಯರ ಎಸ್ಐಟಿ ತಂಡವು, ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಅಯೋಧ್ಯೆ ದೇಣಿಗೆ ಪ್ರಕರಣಕ್ಕೆ ಸಂಬಂಧಿಸಿ ಸ್ಥಿತಿಗತಿ ವರದಿ ಸಲ್ಲಿಸಿದೆ. ಜೂ. 23ರಂದು ರಾಜ್ಯ ಸರ್ಕಾರಕ್ಕೆ 9 ಪುಟಗಳ ಪ್ರಾಥಮಿಕ ವರದಿಯನ್ನು ಈ ತಂಡ ಸಲ್ಲಿಸಿತ್ತು.

ಮೂಲಗಳ ಪ್ರಕಾರ, ಎಸ್ಐಟಿ ತಂಡವು ರಾಮಮಂದಿರದ ದೇಣಿಗೆ ಕಳ್ಳತನದ ತನಿಖೆ ನಡೆಸುವುದರ ಜೊತೆಯಲ್ಲೇ, ಕಾಣಿಕೆ ಹಣ ಎಣಿಕೆ ವ್ಯವಸ್ಥೆಯನ್ನು ಸುಧಾರಿಸಲು, ಪಾರದ ರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಕೆಲವು ಸಲಹೆ ನೀಡಿದೆ ಎನ್ನಲಾಗಿದೆ. ಅಯೋಧ್ಯೆಯ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸಭೆ ಜು.22ರಂದು ನಡೆಯಲಿದ್ದು, ಈ ಸಲಹೆಗಳ ಕುರಿತು ಚರ್ಚೆ ನಡೆಯಲಿದೆ. ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯದ ಮೇಲ್ವಿ ಚಾರಣೆಯಲ್ಲಿ ಸಿಬಿಐ ತನಿಖೆ ನಡೆಸಬೇಕು. ಟ್ರಸ್ಟ್‌ನ ಹಣಕಾಸು ವ್ಯವಹಾರದ ಬಗ್ಗೆ ಸಿಎಜಿ ಲೆಕ್ಕ ಪರಿಶೋಧನೆಗೆ ಒಳಪಡಿಸಬೇಕು ಸೇರಿ ಹಲವು ಅರ್ಜಿಗಳನ್ನೂ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.



### ಶುದ್ಧೀಕರಣ ಪ್ರಾಯಶ್ಚಿತ್ತ ವಿಧಿ ಆರಂಭ

ದೇಣಿಗೆ ಕಳ್ಳತನದಿಂದ ಧಕ್ಕೆಯಾಗಿರುವ ಶ್ರೀರಾಮಮಂದಿರದ ಆಧ್ಯಾತ್ಮಿಕ ಪಾವಿತ್ರ್ಯವನ್ನು ಮರುಸ್ಥಾಪಿಸಲು 10 ದಿನಗಳ ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತ ವಿಧಿಗೆ ಅಯೋಧ್ಯೆ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಚಾಲನೆ ನೀಡಿದೆ. ಜು. 15ರಿಂದಲೇ ಪ್ರಾಯಶ್ಚಿತ್ತ ವಿಧಿ ವಿಧಾನಗಳು ಆರಂಭಗೊಂಡಿದ್ದು ಅಯೋಧ್ಯೆ ಗುರುಕುಲದ ವಿದ್ಯಾರ್ಥಿಗಳು ವಿಷ್ಣು ಸಹಸ್ರ ನಾಮ ಸ್ತೋತ್ರವನ್ನು ಪಠಿಸುತ್ತಿದ್ದಾರೆ. ರಾಮ ಮಂದಿರದ ಪಾವಿತ್ರ್ಯ ಮತ್ತು ಘನತೆಯನ್ನು ಮರುಸ್ಥಾಪಿಸಲು ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತ ವಿಧಿ ನಡೆಯುತ್ತಿದೆ. ಅಂತಿಮವಾಗಿ ಸತ್ಯವು ಶ್ರೀರಾಮನ ಆಶೀರ್ವಾದಿಂದ ಹೊರಬರುತ್ತದೆಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಖಜಾಂಚಿ ಗೋವಿಂದ ದೇವ ಗಿರಿ ಹೇಳಿದರು.

### ಪ್ರಧಾನಿ ಮೌನ ಮುರಿಯಲಿ

ಶ್ರೀರಾಮಮಂದಿರದ ದೇಣಿಗೆ ದುರುಪಯೋಗ ಪ್ರಕರಣ ಸಂಬಂಧಿಸಿ ಪ್ರಧಾನಿ ಮೋದಿ ಅವರು ಮೌನ ಮುರಿಯಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಸ್ಥಾಪನೆಯನ್ನು ಘೋಷಿಸಿದ್ದರು. ಅವರು ಆಯ್ಕೆ ಮಾಡಿದವರೇ ಟ್ರಸ್ಟ್ ಸದಸ್ಯರಾಗಿದ್ದಾರೆ. ಈಗ ಅದೇ ಟ್ರಸ್ಟ್ ದೇಶದ ಅಪಾರ ಸಂಖ್ಯೆಯ ಜನರ ಧಾರ್ಮಿಕ ನಂಬಿಕೆಗೆ ದ್ರೋಹ ಎಸಗಿದೆ. ಈ ಬಗ್ಗೆ ಅವರು ಸದನದಲ್ಲಿ ಉತ್ತರ ನೀಡಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಆಗ್ರಹಿಸಿದ್ದಾರೆ.

## ಎಸ್.ಜಾನಕಿ ಸ್ಮರಣಾಂಜಲಿ ನೆನಪು



• ಪ್ರಜೋದಯ ವರದಿ

**ಹಾಸನ:** ಗಾನಕೋಗಿಲೆ ಎಸ್.ಜಾನಕಿ ಅವರ ಸ್ಮರಣಾರ್ಥ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗು ವಿವಿಧ ಸಂಘ ಸಂಸ್ಥೆಗಳಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶುಕ್ರವಾರ ನಾದದೇವತೆಯ ಸ್ಮರಣಾಂಜಲಿ ಅಮರ ದನಿ-ಅನಂತ ನೆನಪು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಗಾಯಕರಾದ ಬನುಮಾ ಗುರುದತ್ತ, ಚನ್ನರಾಯಪಟ್ಟಣದ ಮಂಜುನಾಥ್, ವೇದಶ್ರೀ, ದೇವರಾಜ್ ಜಾಡಘಟ್ಟ ಹಾಗು ಸಂಗೀತಾ ಯೋಗೇಶ್ ಅವರು ಎಸ್.ಜಾನಕಿ ಅವರ ಹಾಡುಗಳ ಗಾಯನದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಎರಡು ಗಂಟೆಗಳ ಕಾಲ ಸಂಗೀತ ಕಾರ್ಯಕ್ರಮ ನೆರವೇರಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಜಾನಪದ ವಿದ್ವಾಂಸ ಡಾ.ಹಂಪನಹಳ್ಳಿ ತಿಮ್ಮೇಗೌಡ, ಡಾ.ರಾಜಕುಮಾರ್ ಅಭಿಮಾನಿಗಳ ಬಳಗದ ಬಾಳ್ಳುಗೋಪಾಲ್, ವಕೀಲ ಶೇಖರ್, ಹೆಚ್.ಎನ್.ಲೋಕೇಶ್, ಡಾ.ತೇಜಸ್ವಿ, ಕೃಷ್ಣದಾಸ್, ಗ್ಯಾರಂಟಿ ರಾಮಣ್ಣ, ಕಟ್ಟಾಯ ಶಿವಕುಮಾರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ಪತ್ರಕರ್ತರಾದ ವೇಣುಕುಮಾರ್, ವೆಂಕಟೇಶ್, ನಾಗರಾಜ್ ಹೆತ್ತೂರು ಮತ್ತಿತರರು ಹಾಜರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರೋಟರಿ ಜಿಲ್ಲೆ 3182 ವಲಯ 9ರ ರೋಟರಿ ಕ್ಲಬ್‌ಗಳು, ಲಯನ್ಸ್ ಕ್ಲಬ್, ಕುವೆಂಪು ಯುವಕರ ಬಳಗ, ಶ್ರೀ ವಿದ್ಯಾಗಣಪತಿ ಸೇವಾ ಸಮಿತಿ ಗೆಳೆಯರ ಬಳಗ ಹಾಗು ವಿವಿಧ ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಕಾರ್ಯಕ್ರಮ ಜರುಗಿತು.

## ಎಸ್ಐಆರ್: ಶೇ.97.63 ಎನ್ಯುಮರೇಷನ್ ನಮೂನೆ ವಿತರಣೆ

• ಪ್ರಜೋದಯ ವರದಿ



**ಬೇಲೂರು:** ತಾಲ್ಲೂಕಿನಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವು ವೇಗವಾಗಿ ಸಾಗುತ್ತಿದ್ದು, ಒಟ್ಟು 2,04,786 ಮತದಾರರಿಗೆ ಗಣತಿ ನಮೂನೆ ವಿತರಿಸಲಾಗಿದೆ ಎಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ತಿಳಿಸಿದ್ದಾರೆ.

ಜುಲೈ 17ರ ವೇಳೆಗೆ ಶೇ.97.63ರಷ್ಟು ನಮೂನೆಗಳ ವಿತರಣೆ ಪೂರ್ಣಗೊಂಡಿದ್ದು, 1,52,165 ನಮೂನೆಗಳನ್ನು ಡಿಜಿಟಲೀ ಕರಣ ಮಾಡಲಾಗಿದೆ. ಇದು ಒಟ್ಟು ವಿತರಿತ ನಮೂನೆಗಳ ಪೈಕಿ ಶೇ.74.31 ಆಗಿದೆ. ಡಿಜಿಟಲೀಕರಣದ ವೇಳೆ 4,514 ಎಎಸ್‌ಡಿ ಮತದಾರರು ಗುರುತಿಸಲ್ಪಟ್ಟಿದ್ದು, ಅವರಲ್ಲಿ 2,720 ಮಂದಿ ಮೃತಪಟ್ಟವರು, 1,417 ಮಂದಿ ಸ್ಥಳಾಂತರ ಗೊಂಡವರು, 265 ಮಂದಿ ಈಗಾಗಲೇ ನೋಂದಾಯಿತರು, 102 ಮಂದಿ ಗೈರು ಹಾಜರಾದವರು ಹಾಗೂ 10 ಇತರೆ ಪ್ರಕರಣಗಳು ದಾಖಲಾಗಿವೆ.

ಜೂನ್ 30ರಿಂದ ಆರಂಭಗೊಂಡಿರುವ ಈ ವಿಶೇಷ ಪರಿಷ್ಕರಣೆ ಕಾರ್ಯವು ಜುಲೈ 29ರ ವರೆಗೆ ನಡೆಯಲಿದ್ದು, ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿ ಅಗತ್ಯ ಮಾಹಿತಿಯನ್ನು ಸಲ್ಲಿಸುವಂತೆ ತಾಲ್ಲೂಕು ಆಡಳಿತ ಮನವಿ ಮಾಡಿದೆ.

ತಾಲ್ಲೂಕಿನ ಅರೇಹಳ್ಳಿ, ಬಿಕ್ಕೋಡು, ಹಳೇಬೀಡು, ಕಸಬಾ, ಮಡಿಹಳ್ಳಿ, ಪಟ್ಟಣ ಹಾಗೂ ಜಾವಗಲ್ ಹೋಬಳಿಗಳಲ್ಲಿ ಕಾರ್ಯ ಪ್ರಗತಿಯಲ್ಲಿದ್ದು, ಉಳಿದಿರುವ ಮತದಾರರು ಸಹ ಶೀಘ್ರವಾಗಿ ತಮ್ಮ ಗಣತಿ ನಮೂನೆಗಳನ್ನು ಸಲ್ಲಿಸಿ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸುವಂತೆ ಅಧಿಕಾರಿಗಳು ತಿಳಿಸಿದ್ದಾರೆ.

## ದಸರಾ ಉತ್ಸವದಲ್ಲಿ ಕಂಬಳ : ಎ.ಟಿ.ಆರ್. ಖಂಡನೆ

» ಮೊದಲನೇ ಪುಟದಿಂದ

ಪ್ರದರ್ಶಿಸುತ್ತಿದೆ. ನಾಲೆಯಲ್ಲಿ ನೀರು ಕೊಡಲು ಸಾಧ್ಯವಿಲ್ಲದ ಕಾರಣ ರೈತರಿಗೆ ಬೆಳೆ ಬೆಳೆಯದಂತೆ ಸರ್ಕಾರವೇ ಸೂಚಿಸಿದೆ ಮತ್ತು ಕುಡಿಯುವ ನೀರಿನ ಅಭಾವದ ನಡುವೆ ಬೋರವೆಲ್‌ಗಳು ಪಾತಾಳಕ್ಕೆ ಕುಸಿದಿವೆ ಎಂದು ಸ್ವತಃ ಆಡಳಿತ ವರ್ಗವೇ ಹೇಳುತ್ತಿದೆ. ಹೀಗಿರುವಾಗ ಕಂಬಳ ಆಯೋಜನೆಗೆ ಮಾತ್ರ ನೀರನ್ನು ಎಲ್ಲಿಂದ ತರುತ್ತಾರೆ ಎಂದು ಪ್ರಶ್ನಿಸಿರುವ ಅವರು, ಕಂಬಳದ ಸಿದ್ಧತೆಗಾಗಿ ಮರಗಳನ್ನು ಕಡಿಯಲಾಗಿದ್ದು, ಇದು ಅಕ್ರಮ ಎಂದು ಸ್ವತಃ ಸರ್ಕಾರದ ಸಚಿವರೇ ಒಪ್ಪಿಕೊಂಡಿದ್ದಾರೆ. ಪರಿಸರ ನಾಶದಿಂದಾಗಿ ತಾಪಮಾನ ಮತ್ತಷ್ಟು ಹೆಚ್ಚಾಗುತ್ತಿರುವಾಗ, ಪರಿಸರವನ್ನು ಉಳಿಸುವ ಬದಲು ಮರಗಳ ಮಾರಣಹೋಮಕ್ಕೆ ಕಾರಣವಾಗಿರುವ ಈ ನಿರ್ಧಾರಕ್ಕೆ ತೀವ್ರ ಖಂಡನೀಯ. ಅಧಿಕಾರದಲ್ಲಿದ್ದಾಗ ಜನಪ್ರತಿನಿಧಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಆದರೆ ಪ್ರಸ್ತುತ ನಾಯಕರು ನೆಲದ ಕಾನೂನನ್ನು ಗಾಳಿಗೆ ತೂರಿ ಗಾಳಿಯಲ್ಲಿ ತೇಲಾಡುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಹಾಸನ: ನಗರದ ಎಂ.ಜಿ.ರಸ್ತೆಯಲ್ಲಿರುವ ಗುರುರಾಜ ಕಲ್ಯಾಣ ಮಂಟಪದಲ್ಲಿ ಆವನಿ ಸಿಲ್ಕ್ಸ್ ಸ್ಯಾರಿಸ್ ವತಿಯಿಂದ ನಮ್ಮ ಸಂಸ್ಕೃತಿ ಸೀರೆ ಹಬ್ಬ ಹಮ್ಮಿಕೊಳ್ಳಲಾಗಿದೆ. ಜು.21ರ ವರೆಗೆ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ.

### ರಾಜ್ಯದಲ್ಲೇ ಪ್ರಥಮ ಪ್ರಯತ್ನ | ಶಾಸಕ ಸಿಮೆಂಟ್ ಮಂಜು ಚಾಲನೆ

# ಸರ್ಕಾರಿ ಆಸ್ಪತ್ರೆ ಸಿಬ್ಬಂದಿಗೆ ಸೋಂಕು ತಡೆ ಲಸಿಕೆ

• ಪ್ರಜೋದಯ ವರದಿ

**ಆಲೂರು:** ಆಸ್ಪತ್ರೆ ಸಿಬ್ಬಂದಿಗಳು ಆರೋಗ್ಯವಂತರಾಗಿರಬೇಕೆಂಬ ಉದ್ದೇಶದಿಂದ ನ್ಯುಮೊಕೋಕಲ್ ಲಸಿಕೆ ನೀಡುವ ಮೊದಲ ಪ್ರಯತ್ನ ಮಾಡಲಾಗುತ್ತಿದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯೇತರ ಸಿಬ್ಬಂದಿಗಳಿಗೆ ಸೋಂಕು ತಡೆಗಟ್ಟುವ ನ್ಯುಮೊಕೋಕಲ್ ಲಸಿಕೆ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಸ್ಪತ್ರೆಗೆ ಪ್ರತಿದಿನ ವಿವಿಧ ಸೋಂಕು ಹಾಗೂ ಕಾಯಿಲೆಗಳಿಂದ ಬಳಲುತ್ತಿರುವ ನೂರಾರು ರೋಗಿಗಳು ಚಿಕಿತ್ಸೆಗಾಗಿ ಆಗಮಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ರೋಗಿಗಳ ಆರೈಕೆ ಮಾಡುವ ವೈದ್ಯರು ಹಾಗೂ ಸಿಬ್ಬಂದಿಯ ಆರೋಗ್ಯ ರಕ್ಷಣೆ ಅತ್ಯಂತ ಮುಖ್ಯವೆಂದರು.



ದಿನನಿತ್ಯ ನೇರವಾಗಿ ರೋಗಿಗಳನ್ನು ಸಂಪರ್ಕಿಸುವ ಆಸ್ಪತ್ರೆ ಸಿಬ್ಬಂದಿ ಆರೋಗ್ಯವಾಗಿದ್ದಾಗ ಮಾತ್ರ ರೋಗಿಗಳಿಗೆ ಗುಣಮಟ್ಟದ ಸೇವೆ ನೀಡಲು ಸಾಧ್ಯ. ಸಿಬ್ಬಂದಿಯ ಆರೋಗ್ಯ ರಕ್ಷಿಸುವುದು ಎಂದರೆ ರೋಗಿಗಳ ಆರೋಗ್ಯವನ್ನೂ ಕಾಪಾಡಿದಂತೆ. 2,700 ರೂ. ಮೌಲ್ಯದ ನ್ಯುಮೊಕೋಕಲ್ ಲಸಿಕೆ ಸೋಂಕಿನ ಅಪಾಯವನ್ನು ತಡೆಗಟ್ಟಲು ಸಹಕಾರಿಯಾಗಲಿದೆ. ಈ ರೀತಿಯ ಮುನ್ನೆಚ್ಚರಿಕಾ ಕ್ರಮವನ್ನುಕೈಗೊಂಡಿರುವ ತಾಲ್ಲೂಕು ವೈದ್ಯಾಧಿಕಾರಿಡಾ॥ನಿಸಾರ್ ಫಾತಿಮಾ ಮತ್ತು ಆಡಳಿತ ವೈದ್ಯಾಧಿಕಾರಿ ಡಾ॥ಕಿಶೋರ್ ಹಾಗೂ ಸಿಬ್ಬಂದಿಗಳು ಅಭಿನಂದನಾರ್ಹರು ಎಂದರು.

ರಾಜ್ಯದಲ್ಲೇ ಸರ್ಕಾರಿ ಆಸ್ಪತ್ರೆಯ ವೈದ್ಯೇತರ ಸಿಬ್ಬಂದಿಗೆ ಇಂತಹ ಸೋಂಕು ತಡೆ ಲಸಿಕೆ ನೀಡುತ್ತಿರುವುದು ಇದೇ ಮೊದಲ ಪ್ರಯತ್ನವಾಗಿರಬಹುದು. ಈ ಯೋಜನೆ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಸಿಬ್ಬಂದಿಗೂ ವಿಸ್ತರಿಸುವಂತಾಗಬೇಕೆಂದು ಆಶಯ ವ್ಯಕ್ತಪಡಿಸಿದರು.

ಡಾ॥ಕಿಶೋರ್ ಅವರು ಮಾತನಾಡಿ, ಆಸ್ಪತ್ರೆಯ ಸ್ವಚ್ಛತಾ ಸಿಬ್ಬಂದಿ ಸೇರಿ ವೈದ್ಯೇತರ ಸಿಬ್ಬಂದಿ ದಿನನಿತ್ಯ ಸೋಂಕಿತ ರೋಗಿಗಳ ಸಂಪರ್ಕದಲ್ಲೇ ಕೆಲಸ ನಿರ್ವಹಿಸುತ್ತಾರೆ. ಅವರ ಆರೋಗ್ಯದ ಸುರಕ್ಷತೆಗಾಗಿ ಶಾಸಕರ ಸಹಕಾರದೊಂದಿಗೆ ಈ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸ್ಪತ್ರೆ ಸಿಬ್ಬಂದಿಗೆ ಸುರಕ್ಷಿತ ಕಾರ್ಯ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕಾರ್ಯಕ್ರಮ ಜಾರಿಗೊಳಿಸಲಾಗಿದೆ ಎಂದರು.

ರಾಜ್ಯದಲ್ಲೇ ಮಾದರಿಯಾಗುವಂತಹ ಆರೋಗ್ಯ ಕಾಳಜಿಯ ಯೋಜನೆಗೆ ಸಹಕರಿಸಿದ ಶಾಸಕ ಸಿಮೆಂಟ್ ಮಂಜು ಅವರಿಗೆ ಡಾ॥ ಕಿಶೋರ್ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಆಸ್ಪತ್ರೆಯ ಮೇಲಂತಸ್ತಿನಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಶಾಸಕರು ಪರಿಶೀಲಿಸಿದರು.

ತಾಲ್ಲೂಕು ಆಸ್ಪತ್ರೆ ವೈದ್ಯಾಧಿಕಾರಿ ಡಾ॥ನಿಸಾರ್ ಫಾತಿಮಾ, ತಾಲ್ಲೂಕು ಬಿಜೆಪಿ ಮಂಡಲ ಅಧ್ಯಕ್ಷೆ ಉಮಾ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಮುಖಂಡರಾದ ನವೀನ್, ಮೋಹನ್ ಉಪಸ್ಥಿತರಿದ್ದರು.

## ಟೆಸ್ಟ್ ಡ್ರೈವ್‌ಗೆ ಪಡೆದ ಕಾರು ಕಳವು

• ಪ್ರಜೋದಯ ವರದಿ

**ಹಾಸನ:** ಟೆಸ್ಟ್ ಡ್ರೈವ್‌ಗೆಂದು ತೆಗೆದುಕೊಂಡು ಹೋದ ಕಾರನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಸಾತೇನಹಳ್ಳಿಯಲ್ಲಿ ನಡೆದಿದೆ.

ಮಂಗಳೂರಿನ ಇರ್ಷಾದ್ ಎಂಬುವವರಿಗೆ ಸೇರಿದ 4.90 ಲಕ್ಷ ರೂ. ಮೌಲ್ಯದ ಎಸ್ ಕ್ರಾಸ್ ಕಾರನ್ನು ನಗರದ ದಿನೇಶ್ ಮತ್ತು ಪ್ರಶಾಂತ್ ಎಂಬುವವರು ಕದ್ದಿದ್ದಾರೆ. ಇರ್ಷಾದ್ ಅವರು ಹಣದ ಅವಶ್ಯಕತೆ ಇದ್ದರಿಂದ ಕಾರನ್ನು ಅಡವಿಡಲು ನಿರ್ಧರಿಸಿದ್ದರು. ಅದಕ್ಕಾಗಿ ಪರಿಚಯದ ನಗರದ ಜೀತು ಶೆಟ್ಟಿ ಅವರ ಬಳಿ ಹೇಳಿಕೊಂಡಿದ್ದರು.

ಇರ್ಷಾದ್‌ಗೆ ನೆರವಾಗುವ ಉದ್ದೇಶದಿಂದ ಜೀತು ಶೆಟ್ಟಿ ತಮಗೆ ಅನೇಕರು ಪರಿಚಯವಿದ್ದು ಕಾರು ತೆಗೆದುಕೊಂಡು ಬನ್ನಿ, ಹಣ ಕೊಡಿಸುತ್ತೇನೆ ಎಂದಿದ್ದರು. ಆತನ ಮಾತು ನಂಬಿ ಬಂದಿದ್ದ ಇರ್ಷಾದ್‌ಗೆ ಪಂಗನಾಮ ಹಾಕಿದ್ದಾರೆ. ಜು.5ರಂದು ಸಾತೇನಹಳ್ಳಿ ಕೆರೆಯ ಏರಿ ಮೇಲೆ ಕಾರನ್ನು ಟೆಸ್ಟ್ ಡ್ರೈವ್ ಮಾಡುತ್ತೇವೆಂದು ದಿನೇಶ್ ಮತ್ತು ಪ್ರಶಾಂತ್ ಹೋಗಿದ್ದು ಹಲವು ಹೊತ್ತು ಕಾದರೂ ವಾಪಾಸ್ ಬಂದಿಲ್ಲ. ಇಬ್ಬರ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ. ಹತ್ತು ದಿನ ಕಳೆದರೂ ವಾಪಾಸ್ ಬಾರದ ಹಿನ್ನಲೆಯಲ್ಲಿ ಇರ್ಷಾದ್ ಅವರು ಶಾಂತಿಗ್ರಾಮ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ್ದಾರೆ.

## ಜೂಜಾಟ: 7 ಜನರ ಬಂಧನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದ ಏಳು ಜನರನ್ನು ಬಂಧಿಸಿರುವ ಪೊಲೀಸರು ಪಣಕ್ಕಿಟ್ಟಿದ್ದ 25 ಸಾವಿರ ರೂ. ವಶಪಡಿಸಿಕೊಂಡಿರುವ ಘಟನೆತಾಲ್ಲೂಕಿನ ನಗರ್ತಿ ಗ್ರಾಮದ ಅಮಾನಿಕೆರೆ ಬಳಿ ನಡೆದಿದೆ.

ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದರು. ಚನ್ನರಾಯಪಟ್ಟಣ ತಾಲ್ಲೂಕು ಮಹದೇವೇಗೌಡನಕೊಪ್ಪಲು ಗ್ರಾಮದ ರಜನಿ ಕುಮಾರ್, ಹೊಳೆನರಸೀಪುರ ತಾಲ್ಲೂಕು ತಟ್ಟೆಕೆರೆಯ ಚರಣ್, ಮಾರನಾಯಕನಹಳ್ಳಿಯ ಚೇತನ್ ಕುಮಾರ್, ದೇವರಮುದ್ದನಹಳ್ಳಿಯ ಕೃಷ್ಣೇಗೌಡ, ರವಿ, ಸಿಂಗಾಪುರದ ಸೋಮಶೇಖರ್, ಕೆ.ಆರ್.ಪೇಟೆ ತಾಲ್ಲೂಕು ಬೇವಿನಹಳ್ಳಿಯ ಮಹೇಂದ್ರ ಬಂಧಿತರು. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಫಸಲ್ ಭೀಮಾ ಯೋಜನೆ ನೋಂದಣಿಗೆ ಜು.31 ಕಡೇ ದಿನ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಎಲ್ಲಾ ರೈತರು ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ತಮ್ಮ ಬೆಳೆ ಗಳಿಗೆ ಜು.31ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಮನವಿ ಮಾಡಿದರು.

ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ಏರ್ಪಡಿಸಿದ್ದ ಫಸಲ್ ಭೀಮಾ ಯೋಜನೆ ಕುರಿತು ಅರಿವು ಮೂಡಿಸುವ ಜಾಗೃತಿ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯ ಹಾಗು ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಸೇರಿ ವಿವಿಧ ಕಾರಣಗಳಿಂದ ಬೆಳೆ ಹಾನಿಯಾದರೆ ರೈತರಿಗೆ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆ ಜಾರಿಗೆ ತಂದಿದೆ. ರೈತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಆಲೂರು ಹಾಗು ಕಟ್ಟಾಯ ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಅಡಿಕೆ, ಕಾಳುಮೆಣಸು, ಭತ್ತ, ಜೋಳ ಸೇರಿ ವಿವಿಧ ಬೆಳೆಗಳಿಗೆ ಯೋಜನೆಯಡಿ ವಿಮಾ ಸೌಲಭ್ಯ ಲಭ್ಯವಿದೆ. ಬೆಳೆ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ರೈತರಿಗೆ ಪರಿಹಾರ ದೊರೆಯಲಿದ್ದು, ಅಡಿಕೆಗೆ ಸುಮಾರು 1.60 ಲ.ರೂ., ಕಾಳುಮೆಣಸಿಗೆ 47ಸಾವಿರ ರೂ., ಭತ್ತಕ್ಕೆ 75ಸಾವಿರ ರೂ., ಹಾಗು ಜೋಳಕ್ಕೆ 44 ಸಾವಿರ ರೂ. ವರೆಗೆ ವಿಮಾ ರಕ್ಷಣೆ ದೊರೆಯುತ್ತದೆಂದು ತಿಳಿಸಿದರು.



ಈ ವರ್ಷ ಮುಂಗಾರು ಮಳೆ ಶೇ.40ಕ್ಕೂ ಅಧಿಕ ಪ್ರಮಾಣದಲ್ಲಿ ಕೊರತೆಯಾಗಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಇಂತಹ ಸಂದರ್ಭದಲ್ಲಿ ಬೆಳೆಗಳನ್ನು ರಕ್ಷಿಸಿಕೊಳ್ಳಲು ವಿಮೆ ಅಗತ್ಯವಾಗಿದ್ದು, ಪ್ರತಿಯೊಬ್ಬ ರೈತರೂ ಜು.31ರೊಳಗೆ ವಿಮಾ ಕಂತು ಪಾವತಿಸಿ ಯೋಜನೆಯ ವ್ಯಾಪ್ತಿಗೆ ಬರಬೇಕೆಂದು ಮನವಿ ಮಾಡಿದರು.

ಯೋಜನೆಯಡಿ ವಿವಿಧ ಬೆಳೆಗಳಿಗೆ ನಿಗದಿತ ಪ್ರೀಮಿಯಂ ಪಾವತಿಸಿ ಹೆಚ್ಚಿನ ಮೊತ್ತದ ವಿಮಾ ರಕ್ಷಣೆ ಪಡೆಯಲು ಅವಕಾಶವಿದೆ. ರೈತರು ತಮ್ಮ ಬೆಳೆಗೆ ಅನ್ವಯವಾಗುವ ಪ್ರೀಮಿಯಂ ಹಾಗು ವಿಮಾ ಮೊತ್ತದ ಕುರಿತು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದು ತಕ್ಷಣವೇ ನೋಂದಣಿ ಮಾಡಿಸಿಕೊಳ್ಳಬೇಕೆಂದು ಹೇಳಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶೇಷ ಪ್ರಚಾರ ವಾಹನ ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ರೈತರಿಗೆ ಯೋಜನೆಯ ಮಾಹಿತಿ ನೀಡಲಿದೆ. ಯಾವುದೇ ರೈತರು ಈ ಅವಕಾಶವನ್ನು ಕೈಚೆಲ್ಲದೆ ಫಸಲ್ ಭೀಮಾ ಯೋಜನೆಯ ಪ್ರಯೋಜನ ಪಡೆದು ತಮ್ಮ ಕೃಷಿಗೆ ಆರ್ಥಿಕ ಭದ್ರತೆ ಒದಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರಭಾಕರ್ ಇದ್ದರು.

# ಜು.19ಕ್ಕೆ ಪ್ರತಿಭಾ ಪುರಸ್ಕಾರ-ಆರೋಗ್ಯ ತಪಾಸಣಾ ಶಿಬಿರ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ನೇಕಾರ ಕುರುಹಿನ ಶೆಟ್ಟಿ ಪತ್ತಿನ ಸಹಕಾರ ಸಂಘದ 13ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಹಾಗು ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಜುಲೈ 19ರ ಬೆಳಿಗ್ಗೆ 11.30ಕ್ಕೆ ನಗರದ ಕುರುಹಿನಶೆಟ್ಟಿ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಕೃಷ್ಣಶೆಟ್ಟಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 2014-15ನೇ ಸಾಲಿನಲ್ಲಿ ಪತ್ತಿನ ಸಹಕಾರ ಸಂಘ ಪ್ರಾರಂಭವಾಗಿದೆ. 2025-26ನೇ ಸಾಲಿನಲ್ಲಿ ಸಂಘವು 4,71,964 ರೂ. ನಿವ್ವಳ ಆದಾಯಗಳಿಸಿದೆ. ಪ್ರಸ್ತುತ ಸಂಘದಲ್ಲಿ 401 ಷೇರುದಾರರಿದ್ದು, 9 ಲಕ್ಷ ರೂ. ಷೇರು ಬಂಡವಾಳ ಸಂಗ್ರಹಿಸಲಾಗಿದೆ. ಇದೇ ಅವಧಿಯಲ್ಲಿ 40.62 ಲ.ರೂ. ಹೂಡಿಕೆ ಮಾಡಲಾಗಿದ್ದು, 1.10 ಕೋ.ರೂ. ಸಾಲ ವಿತರಿಸಲಾಗಿದೆ. ಸಂಘದ ಒಟ್ಟು ದುಡಿಯುವ ಬಂಡವಾಳ 2.29 ಕೋ.ರೂ. ಆಗಿದ್ದು ಪ್ರಾರಂಭದಿಂದಲೂ ಪ್ರತಿವರ್ಷ ಸದಸ್ಯರಿಗೆ ಶೇ.10ರಷ್ಟು ಲಾಭಾಂಶ ವಿತರಿಸಲಾಗುತ್ತಿದೆಂದು ವಿವರಿಸಿದರು.




ಕಳೆದ ವರ್ಷದಿಂದ ರಾಜ್ಯದಲ್ಲೇ ಅಪರೂಪದ ವಿಶೇಷ ಕಾರ್ಯಕ್ರಮವಾಗಿ ಕುರುಹಿನ ಶೆಟ್ಟಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮವನ್ನು ಸಂಘ ಆಯೋಜಿಸುತ್ತಾ ಬಂದಿದೆ. ಜಿಲ್ಲೆಯ ಕುರುಹಿನ ಶೆಟ್ಟಿ ಸಮಾಜದ ಸ್ನಾತಕ, ಸ್ನಾತಕೋತ್ತರ ಹಾಗು ವೃತ್ತಿಪರ ಕೋರ್ಸ್‌ಗಳಲ್ಲಿ ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದರು.

28 ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಪ್ರತಿಭಾ ಪುರಸ್ಕಾರ ಮಾಡಿ ಅಭಿನಂದಿಸಲಿದ್ದಾರೆ. ಹಾಗೆಯೇ ಸಂಘದ ಸದಸ್ಯರು ಹಾಗು ಸಾರ್ವಜನಿಕರ ಅನುಕೂಲಕ್ಕಾಗಿ ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಸಾರ್ವಜನಿಕರು ಹಾಗು ಸದಸ್ಯರು ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ತಿಮ್ಮರಾಯ ಶೆಟ್ಟಿ, ಚಂದ್ರಶೇಖರ್, ನಾರಾಯಣ್ ಶೆಟ್ಟಿ, ಹೇಮಂತ್‌ಕುಮಾರ್, ಬಾಲಕೃಷ್ಣ ಇದ್ದರು.

## ಎಲ್ಲಾ ಮಕ್ಕಳನ್ನು ಸಮನಾಗಿ ಕಾಣುವುದು ಶಿಕ್ಷಕರ ಜವಾಬ್ದಾರಿ




• ಪ್ರಜೋದಯ ವರದಿ

**ಹಾಸನ:** ಶಿಕ್ಷಕರು ಕರ್ತವ್ಯ ಪಥದಲ್ಲಿ ತಮ್ಮಿಂದ ಪಾಠ ಕಲಿಯುವ ಮಕ್ಕಳಿಗೆ ಹೆತ್ತ ಮಕ್ಕಳಿಗಿಂತ ಅಧಿಕವಾಗಿ ಪ್ರೀತಿ ತೋರಿಸಿ ಹೇಳಿಕೊಟ್ಟಾಗ ಮಗು ಚೆನ್ನಾಗಿ ಅಭ್ಯಾಸ ಮಾಡುತ್ತದೆ. ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣುವುದು ಶಿಕ್ಷಕರ ಜವಾಬ್ದಾರಿ ಎಂದು ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಹುಸ್ಮಾ) ಅಧ್ಯಕ್ಷ ಬಿ.ಇ.ಶಿವರಾಮೇಗೌಡ ಅವರು ಹೇಳಿದರು.

ಸಂಸ್ಕೃತ ಸಂಘ ಮತ್ತು ಹುಸ್ಮಾ ವತಿಯಿಂದ ನಗರದ ಸಂಸ್ಕೃತ ಭವನದಲ್ಲಿ ಏರ್ಪಡಿಸಿದ್ದ ಪಠ್ಯ ಪೂರಕ ಕಥಾ ಕಥನ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ತನ್ನ ಮಗುವಿಗೆ ತೋರಿದ ಪ್ರೀತಿ ಒಂದು ಮಗುವಿನ ಏಳ್ಗೆಗೆ ಕಾರಣವಾಗುತ್ತದೆ. ಅಧಿಕವಾದರೆ ಅದರಿಂದ ಅಪಾಯವೂ ಇದೆ. ಸಾಮೀಪ್ಯದ ಪ್ರೀತಿ ಭಾವವನ್ನು ಎಲ್ಲರೊಡನೆ ವಿನಿಮಯ ಮಾಡಿದಾಗ ಅದು ಪ್ರತಿಯೊಂದು ಮಗುವಿನ ಶ್ರದ್ಧೆಯ ಕಲಿಕೆಗೆ ತನ್ಮೂಲಕ ದೇಶದ ಏಳ್ಗೆಗೂ ಸಹಕಾರಿಯಾಗುತ್ತದೆ. ಸಮರ್ಥ ಶಿಕ್ಷಕ ರಾಷ್ಟ್ರ ರಕ್ಷಕನಾಗುತ್ತಾನೆಂಬುದರಲ್ಲಿ ಸಂದೇಹವಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತ ಸಂಘದ ಅಧ್ಯಕ್ಷ ಎಂ.ಎಸ್.ಶ್ರೀಕಂಠಯ್ಯ ಅವರು ಮಾತನಾಡಿ, ಶಿಕ್ಷಕ ವೃತ್ತಿಯು ತತ್ಕಾಲದಲ್ಲಿ ಫಲವನ್ನು ನೀಡದಿದ್ದರೂ ಬಹುಕಾಲದ ನಂತರ ಹಿಂತಿರುಗಿ ನೋಡಿದಾಗ ಸಮರ್ಪಕ ಕಾರ್ಯಕ್ಕೆ ಜೀವರೂಪಿ ಪ್ರತಿಫಲಗಳು ಕಣ್ಮುಂದೆಯೇ ಕಂಡಾಗ ವೃತ್ತಿಯಿಂದ ದೊರೆತ ಸಾರ್ಥಕ್ಯದ ಸಂತೃಪ್ತಿ ಜೀವನ ಪರ್ಯಂತ ಸಂತಸವನ್ನು ನೀಡುತ್ತದೆ ಎಂದರು.

ಆಕಾಶವಾಣಿ ವಿಶ್ರಾಂತ ಸಹ ನಿರ್ದೇಶಕ ದಿವಾಕರ ಹೆಗಡೆ, ವಿಜ್ಞಾನ ಲೇಖಕ ರೋಹಿತ್ ಚಕ್ರತೀರ್ಥ, ಕನ್ನಡ ಪ್ರಾಧ್ಯಾಪಕ ತಿಮ್ಮಣ್ಣ ಭಟ್ ಮತ್ತು ಕಲಾ ಶಿಕ್ಷಕ ಉ.ರಾ.ನಾಗೇಶ್ ಮತ್ತಿತರರಿದ್ದರು.

ಕನ್ನಡ ಮತ್ತು ಸಮಾಜ ವಿಜ್ಞಾನ ಬೋಧಿಸುವ 65 ಶಿಕ್ಷಕರು ಪಾಲ್ಗೊಂಡಿದ್ದರು.

### ಸುಪ್ರೀಂ ಕೋರ್ಟ್ ಮತ್ತೊಮ್ಮೆ ಸ್ಪಷ್ಟನೆ

# ಹೆಸರು ಅಳಿಸಿದ ಮಾತ್ರಕ್ಕೆ ಪೌರತ್ವ ರದ್ದಾಗುವುದಿಲ್ಲ

• ಪ್ರಜೋದಯ ವರದಿ

**ನವದೆಹಲಿ:** ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ವೇಳೆ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವುದರಿಂದ ವ್ಯಕ್ತಿಯೊಬ್ಬರು ತನ್ನ ಪೌರತ್ವವನ್ನು ಸ್ವಯಂಚಾಲಿತವಾಗಿ ಕಳೆದುಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಇಂದು (ಶುಕ್ರವಾರ) ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಮೇಲ್ಮನವಿ ನ್ಯಾಯಮಂಡಳಿಗಳಲ್ಲಿ ವಿಚಾರಣೆ ಪ್ರಕ್ರಿಯೆಯನ್ನು ಸುಗಮಗೊಳಿಸುವಂತೆ ಪ್ರಸೇನ್‌ಜಿತ್ ಬೋಸ್ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತುನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿ.ಮೋಹನಾ ಅವರಿದ್ದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ವೇಳೆ, ಬಿಹಾರದ ಎಸ್ಐಆರ್ ಕುರಿತು ತಾನು ಈ ಹಿಂದೆ ನೀಡಿದ್ದ ತೀರ್ಪನ್ನು ಪುನರುಚ್ಚರಿಸಿದ ಪೀಠವು, ಪೌರತ್ವವನ್ನು ನಿರ್ಧರಿಸಲು ಚುನಾವಣಾ ಆಯೋಗವು ಸಾಂವಿಧಾನಿಕ ಸಂಸ್ಥೆಯಲ್ಲ ಎಂಬುದನ್ನು ಒತ್ತಿ ಹೇಳಿದೆ. ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಗೋಪಾಲ್ ಶಂಕರ ನಾರಾಯಣನ್ ಅವರು, ಎಸ್ಐಆರ್ ನಂತರ ಮತದಾರರ ಪಟ್ಟಿಯಿಂದ ಹೊರಗಿರುವವರು ತಳಮಟ್ಟದಲ್ಲಿ ಎದುರಿಸುತ್ತಿರುವ ಪರಿಸ್ಥಿತಿಯನ್ನು ನ್ಯಾಯಾಲಯದ ಗಮನಕ್ಕೆ ತಂದರು.



ಪಶ್ಚಿಮ ಬಂಗಾಳದ 19 ಮೇಲ್ಮನವಿ ನ್ಯಾಯಮಂಡಳಿಗಳ ಮುಂದೆ ಸದ್ಯಕ್ಕೆ ಬರೋಬ್ಬರಿ 34 ಲಕ್ಷ ಮೇಲ್ಮನವಿಗಳು ಬಾಕಿ ಉಳಿದಿದೆ. ಈಗಾಗಲೇ ಇಬ್ಬರು ನ್ಯಾಯಾಧೀಶರು ರಾಜೀನಾಮೆ ನೀಡಿದ್ದಾರೆ. ಇದುವರೆಗೆ ಕೇವಲ 38,000 ಮೇಲ್ಮನವಿಗಳನ್ನು ಮಾತ್ರ ವಿಲೇವಾರಿ ಮಾಡ ಲಾಗಿದೆ. ವಿಲೇವಾರಿಯಾದ ಮೇಲ್ಮನವಿಗಳ ಪೈಕಿ ಶೇ.70 ರಷ್ಟು ಪ್ರಕರಣಗಳಲ್ಲಿ ಹೆಸರುಗಳನ್ನು ಮರುಸೇರ್ಪಡೆಗೊಳಿಸಲಾಗಿದೆಂದು ಪೀಠಕ್ಕೆ ತಿಳಿಸಿದರು.

ನ್ಯಾಯಾಲಯದಲ್ಲಿ ಮೇಲ್ಮನವಿಗಳು ಬಾಕಿಯಿದ್ದರೂ ಪಶ್ಚಿಮ ಬಂಗಾಳ ಸರ್ಕಾರವು ಮತ ದಾರರ ಪಟ್ಟಿಯಿಂದ ಹೆಸರು ಕೈಬಿಡಲಾದವರಿಗೆ ಅನ್ನಪೂರ್ಣ ಯೋಜನೆ, ಜಾತಿ ಪ್ರಮಾಣ ಪತ್ರಗಳ ಸೌಲಭ್ಯಗಳನ್ನು ನಿರಾಕರಿಸಿ ಅಧಿಸೂಚನೆಗಳನ್ನು ಹೊರಡಿಸಿದೆ ಎಂದು ತಿಳಿಸಿದರು.

ಮೇಲ್ಮನವಿಗಳು ಬಾಕಿ ಇರುವಾಗ ಇಂತಹ ಸೌಲಭ್ಯಗಳನ್ನು ನಿರಾಕರಿಸಬಾರದೆಂದು ಸ್ಪಷ್ಟಪಡಿಸುವಂತೆಯೂ ನ್ಯಾಯಾಲಯವನ್ನು ಕೋರಿದರು. ಅದಕ್ಕೆ ಪ್ರತಿಕ್ರಿಯಿಸಿದ ಪೀಠ, ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸುವ ಅಥವಾ ಹೊರ ಗಿಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದೇ ಹೊರತು, ಪೌರತ್ವವನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂದು ತಿಳಿಸಿದೆ.

## ಡೋಪಿಂಗ್: ಮೊಹಮ್ಮದ್ ನವಾಜ್‌ಗೆ ಮೂರು ತಿಂಗಳ ನಿಷೇಧ

• ಪ್ರಜೋದಯ ವರದಿ

**ದುಬೈ:** ಟಿ-20 ವಿಶ್ವಕಪ್ ವೇಳೆ ನಿಷೇಧಿತ ಉದ್ದೀಪನ ಮದ್ದು ಸೇವಿಸಿದ ಪ್ರಕರಣದಲ್ಲಿ ಪಾಕಿಸ್ತಾನದ ಆಲ್‌ರೌಂಡರ್ ಮೊಹಮ್ಮದ್ ನವಾಜ್‌ಗೆ ಅಂತರರಾಷ್ಟ್ರೀಯ ಪಂದ್ಯಗಳಿಂದ ಮೂರು ತಿಂಗಳು ನಿಷೇಧ ವಿಧಿಸಲಾಗಿದೆ ಎಂದು ಐಸಿಸಿ ತಿಳಿಸಿದೆ.

ಫೆ.7ರಂದು ಕೊಲಂಬೊದಲ್ಲಿ ನೆದರ್ಲೆಂಡ್ಸ್ ವಿರುದ್ಧ ನಡೆದ ಟಿ-20 ವಿಶ್ವಕಪ್ ಪಂದ್ಯದ ನಂತರ ಅವರು ಡೋಪಿಂಗ್ ಪರೀಕ್ಷೆಗೆ ಒಳಗಾಗಿದ್ದರು. ಈ ವೇಳೆ 32 ವರ್ಷದ ನವಾಜ್ ಅವರು ನಿಷೇಧಿತ ಕಾರ್ಬಾಕ್ಸಿ-ಟಿಎಚ್‌ಸಿ ಸೇವಿಸಿದ್ದು ಪತ್ತೆಯಾಗಿತ್ತು.

ಐಸಿಸಿಯ ಡೋಪಿಂಗ್-ವಿರೋಧಿ ನಿಯಮಾವಳಿಯನ್ನು ಉಲ್ಲಂಘಿಸಿದನ್ನು ನವಾಜ್ ಒಪ್ಪಿ ಕೊಂಡಿದ್ದಾರೆ ಮತ್ತು ಆ ವಸ್ತುವನ್ನು ಪಂದ್ಯಾವಳಿಯ ಸ್ಪರ್ಧೆಯ ಅವಧಿಯ ಹೊರಗೆ ಹಾಗೂ ಕ್ರೀಡಾ ಪ್ರದರ್ಶನಕ್ಕೆ ಸಂಬಂಧಿಸದ ರೀತಿಯಲ್ಲಿ ಬಳಸಲಾಗಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆ. ಇದೀಗ ಅವರಿಗೆ ನೀಡಿರುವ ನಿಷೇಧವನ್ನು ಒಪ್ಪಿಕೊಂಡಿದ್ದಾರೆಂದು ಹೇಳಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK